# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 160 Issue: 160 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 26.12.2024 26.12.2024 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2









## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 25–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.82 ಅಡಿ |
| ಒಳ ಹರಿವು | 429 ಕ್ಯುಸೆಕ್ |
| ಹೊರ ಹರಿವು | 7432 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 86.098 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1589.44 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 858 ಕ್ಯುಸೆಕ್ |
| ಸಾಮರ್ಥ್ಯ | 10.572 ಟಿಎಂಸಿ |

## ಒಳ ಪುಟಗಳಲ್ಲಿ


ಸರ್ಕಾರಿ ಶಾಲಾ ಅಭಿವೃದ್ಧಿ ಆಡಳಿತದಲ್ಲಿ ಎಸ್.ಡಿ.ಎಂ.ಸಿ. ವರವೋ, ಶಾಪವೋ? ಪುಟ–3

ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ ಫಲಿತಾಂಶ ಪುಟ–4

ಯಶಸ್ಸಿಗೆ ರಹದಾರಿ ಪುಟ–2


# ಶಿಶುವಿಗೆ ಪೆಂಟಾವಲೆಂಟ್ ಲಸಿಕೆ ಹಾಕಿಸಿ

## ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಹೇಳಿಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಜನನವಾದ 45 ದಿನಗಳ ಅವಧಿಯಲ್ಲಿ ಶಿಶುವಿಗೆ ಪೆಂಟಾವಲೆಂಟ್ ಲಸಿಕೆಯನ್ನು ಹಾಕಿಸುವ ಮೂಲಕ ಮಾರಕ ರೋಗಗಳು ತಡೆಗಟ್ಟಲು ಪಾಲಕರು ಕೈ ಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ದೇವಿನಗರ ಇವರ ಸಂಯುಕ್ತಾಶ್ರಯದಲ್ಲಿ ದೇವಿನಗರ ಅಂಗನವಾಡಿ ಕೇಂದ್ರದಲ್ಲಿ ಡಿಸೆಂಬರ್ 31 ರವರೆಗೆ ಜರುಗುವ ಪೆಂಟಾವಲೆಂಟ್ ಲಸಿಕೆ ವಿಶೇಷ ಅಭಿಯಾನದ ಚಾಲನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಬಾಲ್ಯದಲ್ಲಿ ಕಂಡು ಬರುವ ಮಾರಕ ಕಾಯಿಲೆಗಳಿಂದ ಮಕ್ಕಳ ಆರೋಗ್ಯದ ದೃಷ್ಟಿಯಿಂದ 12 ಮಾರಕ ರೋಗಗಳಿಗೆ ಸಂಬಂಧಿಸಿದ ಲಸಿಕೆಗಳನ್ನು ಮಕ್ಕಳಿಗೆ ನೆಗಡಿ, ಕೆಮ್ಮು ಸಾಧಾರಣ ಜ್ವರ ಇದ್ದರೂ ಸಹ ಯಾವುದೇ ಹಿಂಜರಿಕೆಯಿಲ್ಲದೆ ಲಸಿಕೆ



ಹಾಕಿಸುವ ಮೂಲಕ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ತಪ್ಪದೇ ಪಾಲಕರು ಲಸಿಕೆಗಳನ್ನು ಹಾಕಿಸಬೇಕು ಎಂದು ಕೋರಿದರು.

ಒಂದು ಚುಚ್ಚುಮದ್ದು ನೀಡುವ ಮೂಲಕ 5 ರೋಗಗ ಳನ್ನು ತಡೆಗಟ್ಟಲು ಸಹಾಯಕವಾಗುವ ಪೆಂಟಾವಲೆಂಟ್ ಲಸಿಕೆಯನ್ನು ಮಗುವಿನ ಒಂದುವರೆ ತಿಂಗಳು, ಎರಡುವರೆ ತಿಂಗಳು ಹಾಗೂ ಮೂರುವರೆ ತಿಂಗಳು ವಯಸ್ಸಿನ ಅವಧಿಯಲ್ಲಿ ಹಾಕಿಸಬೇಕು. ಈ ಮೂಲಕ ಗಂಟಲು ಮಾರಿ, ನಾಯಿಕೆಮ್ಮು, ಧನುರ್ವಾಯು, ಯಕೃತ್ತಿನ ಉರಿ ಮತ್ತು ಊತ, ಕಾಮಾಲೆ, ಹೆಚ್‌ಇನ್‌ಫ್ಲ್ಯುಯೆಂಜಾ ಬಿ, ಮೆದುಳು ರೋಗ ಮೆನಂಜೆಟೀಸ್ ರೋಗಗಳನ್ನು ತಡೆಗಟ್ಟಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಮಕ್ಕಳ ಸದೃಢ ಆರೋಗ್ಯಕ್ಕಾಗಿ ತಪ್ಪದೇ ಲಸಿಕೆಗಳನ್ನು ಹಾಕಿಸಬೇಕು. ಒಂದು ವರ್ಷದ ಒಳಗಡೆ ಮಗುವಿಗೆ ಪೆಂಟಾವಲೆಂಟ್ ಲಸಿಕೆ ಹಾಕಿಸದೇ ಇದ್ದರೂ ಸಹ ತಪ್ಪದೇ ಲಸಿಕೆ ಹಾಕಿಸಲು ವಿನಂತಿಸಿದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಹನುಮಂತಪ್ಪ ಮಾತನಾಡಿ, ಮಗು ವಿಗೆ ಹುಟ್ಟಿದ ತಕ್ಷಣ ಪೋಲಿಯೋ, ಹೆಪಟೈಟಿಸ್ ಬಿ, ಬಾಲಕ್ಷಯ ರೋಗ ತಡೆಗಟ್ಟಲು ಲಸಿಕೆಗಳನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಕಲಾಗುತ್ತಿದೆ ಎಂದು ಹೇಳಿದರು.

ಮಗುವಿನ ಒಂದುವರೆ ತಿಂಗಳು, ಎರಡುವರೆ ತಿಂಗಳು ಹಾಗೂ ಮೂರುವರೆ ತಿಂಗಳು ವಯಸ್ಸಿನ ಅವಧಿಯಲ್ಲಿ ಅತಿಸಾರಬೇಧಿಗೆ ರೋಟಾವೈರಸ್, ನಿಮೋಕಾಕಲ್ ಲಸಿಕೆ, ಪೆಂಟಾವಲೆಂಟ್ ಹಾಗೂ ಪೋಲಿಯೋ ಲಸಿಕೆಯನ್ನು ಬಾಯಿ ಮೂಲಕ ಹಾಗೂ ಚುಚ್ಚುಮದ್ದು ಮೂಲಕ ನೀಡಲಾಗುತ್ತದೆ ಎಂದರು.

ಮಗುವಿಗೆ 9 ತಿಂಗಳು ತುಂಬಿದ ನಂತರ ಮೆದುಳು ಜ್ವರ ರೋಗಕ್ಕೆ ಜಾಪನೀಸ್ ಎನ್ಸ್‌ಪಲಿಟಿಸ್ ಲಸಿಕೆ, ದಡಾರ ರೂಬೆಲ್ಲಾ ರೋಗಕ್ಕೆ ಮಿಸಲ್ಸ್ ರೂಬೆಲ್ಲಾ ಲಸಿಕೆ ಮತ್ತು ಸಂಜೆಯ ಹೊತ್ತು ಕಂಡುಬರುವ ಇರುಳುಗಣ್ಣು ರೋಗಕ್ಕೆ ವಿಟಾಮಿನ್–ಎ ಅನ್ನಾಂಗ ದ್ರಾವಣ ನೀಡಲಾಗುತ್ತದೆ. ಇವೆಲ್ಲವುಗಳನ್ನು ಮಗುವಿನ ಒಂದು ವರ್ಷದೊಳಗೆ ಹಾಕಲಾಗುತ್ತಿದ್ದು, ಇವುಗಳನ್ನು ತಪ್ಪದೆ ಆರೋಗ್ಯ ಕೇಂದ್ರಗಳಲ್ಲಿ ಪಡೆದುಕೊಳ್ಳಬೇಕು. ಗ್ರಾಮ ವಾರ್ಡ್‌ಗಳಲ್ಲಿ ಪ್ರತಿ ಗುರುವಾರ ಹಾಕುವ ಬಗ್ಗೆ ಹೆಚ್ಚು ಜಾಗೃತಿ ನೀಡಬೇಕು ಎಂದು ಸೂಚಿಸಿದರು.

ಆಡಳಿತ ವೈದ್ಯಾಧಿ ಕಾರಿ ಡಾ. ಸುರೇಖ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್.ದಾಸಪ್ಪನವರ, ಡಿಎನ್‌ಓ ಗಿರೀಶ್, ಪಿಹೆಚ್‌ಸಿಓ ಕಾವ್ಯ, ಹೆಚ್‌ಐಓ ರಾಮಕೃಷ್ಣ, ಆಶಾಕಾರ್ಯಕರ್ತೆ ಹೈಯತುನ್ನೀಸ, ಇತರರಿದ್ದರು.

# ಬಸ್ಸಲ್ಲಿ ಸಿಕ್ಕ ಚಿನ್ನಾಭರಣಗಳ ಬ್ಯಾಗ್ ಮರಳಿಸಿ ಪ್ರಾಮಾಣಿಕತೆ ಮೆರೆದ ರಾಘವೇಂದ್ರ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಎಪಿಎಂಸಿ ವೃತ್ತದ ಬಳಿ ಸಾರಿಗೆ ಬಸ್ಸಲ್ಲಿ ಕೈಚೀಲ ಮರೆತು ಇಳಿದಿದ್ದ ಪ್ರಯಾಣಿಕ ಹೂವಿನಹಡಗಲಿಯ ಮುದುಕಪ್ಪ ಶೆಗಡಿಯವರಿಗೆ ಮೌಲ್ಯಯುತ ಚಿನ್ನಾಭರಣವುಳ್ಳ ಬ್ಯಾಗ್‌ನ್ನು ಅದೇ ಬಸ್ಸಲ್ಲಿ ಪ್ರಯಾಣಿಸುತ್ತಿದ್ದ ಹೊಸಪೇಟೆ ತಾಲೂಕಿನ ಮಲಪನಗುಡಿಯ ಎಚ್.ರಾಘವೇಂದ್ರ ನಗರದ ಪಟ್ಟಣ ಠಾಣೆ ಪೊಲೀಸರ ಮೂಲಕ ವ್ಯಕ್ತಿಗೆ ಚಿನ್ನಾಭರಣ ಸಮೇತ ಬ್ಯಾಗ್ ಮರಳಿಸಿ ಪ್ರಾಮಾಣಿಕತೆ ಮೆರೆದಿದ್ದಾನೆ. ಚೈನ್‌ಸರ ಹ್ಯಾಂಗಿಂಗ್ಸ್, ಉಂಗುರು ಸೇರಿದಂತೆ ಒಟ್ಟು 45 ಗ್ರಾಂ ಚಿನ್ನಾಭರಣ, 80 ಗ್ರಾಂ ಬೆಳ್ಳಿ ಆಭರಣಗಳಿದ್ದವು. ಚಿನ್ನಾಭರಣವುಳ್ಳ ಬ್ಯಾಗ್ ಮರಳಿಸಿದ ಎಚ್.ರಾಘವೇಂದ್ರಗೆ ವಿಜಯನಗರ ಜಿಲ್ಲಾ ಪೊಲೀಸರು ಮೆಚ್ಚುಗೆ ವ್ಯಕ್ತಪಡಿಸಿ ಬುಧವಾರ ಠಾಣೆಯಲ್ಲಿ ಎಎಸ್ಪಿ ಸಲೀಂಪಾಷ ಸನ್ಮಾನಿಸಿದರು. ಠಾಣೆ ಸಿಪಿಐ, ಪೊಲೀಸರು ಇದ್ದರು. ಬ್ಯಾಗ್ ಮಾಲೀಕ ಹರ್ಷಗೊಂಡರು.

## ಆನಂದ ಬಾಣ




## ಹಂಪಿ ಟೈಮ್ಸ್ ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ–5

**ಈ ವಾರದ (27–12–2024) ಚಿತ್ರಸ್ಪರ್ಧೆ**

ವಿಷಯ: ತಾಮ್ರದ ವಿದ್ಯುತ್ ವಿಭಜನೀಯ ಶುದ್ಧೀಕರಣ ಮಾಡುವ ಉಪಕರಣದ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ

ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಹಿಸಲು ಮನವಿ.

10ನೇ ತರಗತಿ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.


ವಾಟ್ಸ್‌ಪ್ ನಂ: 99726 03099

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 94486 33038

# ಕೂಲಿ ಕೆಲಸಕ್ಕೆ ಹೋಗ್ಬೇಕು ಸಮಯಕ್ಕೆ ಸರಿಯಾಗಿ ಕುಡಿಯುವ ನೀರು ಬಿಡ್ರಪ್ಪ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಆಲೂರು ಗ್ರಾಮ ಪಂಚಾಯತಿಯ ಕಾನಾಮಡುಗು ಗ್ರಾಮದಲ್ಲಿ ದಲಿತ ಕಾಲೋನಿಗೆ ದಿನನಿತ್ಯ ಬಳಸುವಂತಹ ಕುಡಿಯುವ ನೀರು ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ. ನಿತ್ಯ ಕೂಲಿ ಕೆಲಸವನ್ನೇ ಆಶ್ರಯಿಸಿದ ಬಡ ಜನರು ನೀರಿಗಾಗಿ ಕಾದು ಕೂಲಿ ಕೆಲಸ ಬಿಡುವಂತಾಗಿದೆ. ನೀರು ಗಂಟಿಯ ನಿರ್ಲಕ್ಷವೋ, ಪೈಪ್ ಲೈನಿನ ಸಮಸ್ಯೆಯೋ ಒಂದು ತಿಳಿಯದಂತಾಗಿದೆ, ಈ ಓಣಿಯಲ್ಲಿ 70ಕ್ಕೂ ಹೆಚ್ಚು ಕುಟುಂಬಗಳು ವಾಸವಾಗಿದ್ದು ಎಲ್ಲಾ ಕುಟುಂಬಗಳಿಗೂ ಇರುವುದು ಒಂದೇ ನೀರಿನ ಟ್ಯಾಂಕ್, ಇರುವುದರಿಂದ ಇತರ ಸಮಸ್ಯೆ ಹೆಚ್ಚಾಗಿದೆ, ಅದಕ್ಕಾಗಿ ಈ ಹಿಂದೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯವರಿಗೂ ಮನವಿ ಮಾಡಿದರು ಪ್ರಯೋಜನವಾಗಿಲ್ಲ, ನಮ್ಮ ಸಮಸ್ಯೆಗೆ ಯಾರೂ ಕಿವಿಗೊಡುತ್ತಿಲ್ಲವೆಂದು ಜನರು ಅಳಲು ತೋಡಿಕೊಂಡಿದ್ದಾರೆ. ಗ್ರಾಮದ ಎಲ್ಲಾ ಕಾಲೋನಿಗಳಿಗೆ ಸಮಯಕ್ಕೆ ಸರಿಯಾಗಿ ಕುಡಿಯುವ ನೀರು ಬರುತ್ತದೆ ಆದರೆ ದಲಿತ ಕಾಲೋನಿಗೆ ಮಾತ್ರ ಸಮಯಕ್ಕೆ ಸರಿಯಾಗಿ ಕುಡಿಯುವ ನೀರು ಬರುವುದಿಲ್ಲ ಆದ್ದರಿಂದ, ಈ ಕಾಲೋನಿಯಲ್ಲಿ ಬೀದಿನಲ್ಲಿಗಳನ್ನು ಅಳವಡಿಸಿದರೆ ಬಹಳ ಅನುಕೂಲ ಆಗುತ್ತೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.



> ಗ್ರಾಮದ ಎಲ್ಲಾ ಓಣಿಗಳಿಗೆ ನೀರಿನ ಪೂರೈಕೆಯಾದಂತೆ ದಲಿತ ಕಾಲೋನಿಗೆ ಸರಿಯಾದ ಸಮಯಕ್ಕೆ ಕುಡಿಯುವ ನೀರು ಬಿಡುತ್ತಿಲ್ಲ. ನಮ್ಮ ಕಾನೂನಿಗೆ ಒಂದೇ ಟ್ಯಾಂಕ್ ಇದೆ. ಬೀದಿ ನಲ್ಲಿಗಳಿಲ್ಲದೆ ಪರದಾಡುವಂತಾಗಿದೆ. ಗ್ರಾಮ ಪಂಚಾಯಿತಿ ಅಧಿಕಾರಿಗಳ ಗಮನಕ್ಕೂ ತಂದರೂ ಪ್ರಯೋಜನವಿಲ್ಲ. ಬೀದಿ ನಲ್ಲಿ ಗಳನ್ನು ಅಳವಡಿಸಿಕೊಟ್ಟರೆ ಅನುಕೂಲವಾಗಲಿದೆ.
>
> – ಎನ್.ಫಕೀರಪ್ಪ ಡಿಎಸ್‌ಎಸ್ ಮುಖಂಡ ಕಾನಾಮಡುಗು

> ಜಾತ್ರೆ ಸಮಯದಲ್ಲಿ ಪರಿಶೀಲಿಸಿ ಸಮಸ್ಯೆ ಸರಿಪಡಿಸಲಾಗಿತ್ತು ಮತ್ತೆ ಅದೇ ರೀತಿ ಆಗಿದೆ. ಪೈಪ್ ಲೈನ್ ಗೇಟ್ ವಾಲ್ ಸಮಸ್ಯೆಯಿಂದಾಗಿ ನೀರು ಬಿಡಲು ವಿಳಂಬವಾಗುತ್ತಿದೆ. ಸಮಸ್ಯೆ ಮರುಕಳಿ ಸದಂತೆ ಕ್ರಮವಹಿಸುತ್ತೇವೆ.
>
> – ವಿನಯ್ ಕುಮಾರ್ ಪಿಡಿಓ ಆಲೂರು






## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

### Sub : English (S.L) Prose : Colours of Silence

**Most important 3/4 marks questions and answers.**

**1. Sathish Gujral became popular all over the world in spite of his physical disability. Support the statement with your answer. OR "Physical disability is not a barrier to success." Justify the statement with reference to the life of Sathish.**

Ans : Sathish Gujral met with an accident and became deaf. He was refused by schools and he remained at home. One day he saw a beautiful bird that made him take up drawing and painting. Sathish Gujral is one among the foremost artists of India. He is accomplished in several art forms like painting, sculpture, and architecture. Exhibitions of his works have been held all over the world and displayed in prestigious museums like the museum of Modern Art, the New York, the Hiroshima Collection, Washington, and the National Gallery of Modern Art, New Delhi. As a writer, he published four books of his works in various languages. The Govt of India has honoured him with the Padma Vibhushan. His silent life of achievement is an absolute proof that physical disability is not a barrier to success.

**2. Why was Sathish confined to bed? What was the worst thing for him? Why was it so?**

Ans : Sathish was seriously ill, he felt as if some huge weight was pressing upon his head making everything seem far away and silent. He felt helpless and upset at being confined to bed. He couldn't hear. Everything seemed like scenes from some pantomime show. Silence was the worst thing for him.

**3. Why did the new school refuse to admit Sathish? What did the head master advise Sathish's father?**

Ans : Avtar Narain requested the headmaster of the new school. The head master told Narain that the school was for normal boys. He advised him to take his son to the school for the deaf and dumb.

**4. How did the bird in the garden change Sathish's life?**

Ans : One day, when Sathish was looking gloomily into the far corner of the garden, he saw a bird that was unlike any he had seen before. The most interesting thing about the bird was its restless energy. Sathish stared the beautiful bird for a long time. He jumped down from his bed and took out his note book and pencil. He sketched the bird from memory with a few deft strokes. He became very interested in drawing in his life.

**5. Sathish discovered another past time. What was that?**

Ans : Sathish sat on his bed and began filling pages and pages with doodles. His strokes carried with his moods-angry,soothing and humorous. He was good at Urdu calligraphy. So sketching came naturally to him.

**6. How did Sathish's brother Inder try to help him?**

Ans : When Sathish became very moody and couldn't talk freely with anyone because he was unable to hear a single word. Even he was unable to bear the truants and teasing of the children. His brother Inder every time sat beside him for hours and talked to him, taught him new words and pronunciation. Inder spent most of his time with his brother to help him.

PRACTICE MAKES PERFECT

"ಇಂದಿನ ಪರಿಶ್ರಮವೇ ನಾಳಿನ ಯಶಸ್ಸು"

Prepared by : RB Gurubasavaraj Teacher. GHS Basarakodu. H.B.Halli Taluk. Vijayanagara Dist


ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

## ಸ್ಟುಡೆಂಟ್ ಕಾಲಂ

# ಕುಂಟ ಜಿಂಕೆ



ಒಂದು ದಟ್ಟವಾದ ಕಾಡಿನಲ್ಲಿ ಅನೇಕ ಪ್ರಾಣಿಗಳು ವಾಸವಾಗಿದ್ದವು. ಅವುಗಳಲ್ಲಿ ಜಿಂಕೆಗಳು ಸಹ ಇದ್ದವು. ಅಲ್ಲಿ ಹತ್ತು ಜಿಂಕೆಗಳು ವಾಸವಾಗಿದ್ದವು. ಅದರಲ್ಲಿ ಒಂದು ಕುಂಟ ಜಿಂಕೆ ಇತ್ತು. ಕುಂಟ ಜಿಂಕೆ ಕಂಡರೆ ಉಳಿದ ಜಿಂಕೆಗಳಿಗೆ ಆಗುತ್ತಿರಲಿಲ್ಲ. ಕುಂಟ ಜಿಂಕೆಯ ಆಹಾರವನ್ನು ಉಳಿದ ಜಿಂಕೆಗಳು ತಿನ್ನುತ್ತಿದ್ದವು. ಕುಂಟ ಜಿಂಕೆಗೆ ಬೇಸರವಾಗುತ್ತಿತ್ತು.

ಒಂದು ದಿನ ಕುಂಟ ಜಿಂಕೆಯು ಆಹಾರವನ್ನು ಹುಡುಕುತ್ತ ಒಂದು ದೇವಸ್ಥಾನದ ಬಳಿ ಬಂದಿತು. ಅದು ಆಹಾರ ಹುಡುಕುತ್ತಾ ದೇವಸ್ಥಾನದ ಒಳಗೆ ಹೋಗಿತ್ತು. ಅದು ಪೂಜಾರಿಗೆ ಗೊತ್ತಾಗಲಿಲ್ಲ. ಪೂಜಾರಿ ಬಾಗಿಲು ಹಾಕಿಕೊಂಡು ಮನೆಗೆ ತೆರಳಿದ. ಆಗ ಕುಂಟ ಜಿಂಕೆಗೆ ಬಹಳ ಬೇಸರವಾಗಿತು ಮರುದಿನ ಕುಂಟ ಜಿಂಕೆಗೆ ಬಹಳ ಹಸಿವಾಗಿತ್ತು. ಅದೇ ಸಮಯಕ್ಕೆ ಪೂಜಾರಿ ದೇವಸ್ಥಾನಕ್ಕೆ ಬಂದಿದ್ದನು. ಕುಂಟ ಜಿಂಕೆ ಪೂಜಾರಿಯನ್ನು ನೋಡಿತು. ತಕ್ಷಣ ಒಂದು ಉಪಾಯ



ಮಾಡಿತು. ಅದೇನೆಂದರೆ ಪೂಜಾರಿಯು ದೇವಸ್ಥಾನದ ಒಳಗೆ ಬರುವಾಗ ದೇವರ ಧ್ವನಿಯಲ್ಲಿ 'ನನಗೆ ಆಹಾರ ಬೇಕು ಹಸಿವಾಗಿದೆ' ಎಂದು ಹೇಳಿತು. ದೇವರ ಧ್ವನಿ ಕೇಳಿ ಪೂಜಾರಿಗೆ ಆಶ್ಚರ್ಯವಾಯಿತು.

ಕೂಡಲೇ ಪೂಜಾರಿಯು ಮನೆಗೆ ಹೋಗಿ ಸಂತೋಷದಿಂದ ಆಹಾರವನ್ನು ತಂದನು. ದೇವರ ಮುಂದೆ ಇರಿಸಿದನು. ಆಗ ಕುಂಟ ಜಿಂಕೆಯು 'ಸರಿ ನೀನು ಹೊರಗೆ ಹೋಗು. ನಾನು ಆಹಾರ ತಿನ್ನುವುದನ್ನು ನೋಡಬೇಡ' ಎಂದಿತು. ಪೂಜಾರಿ ಹೊರಗೆ ಹೋದನು. ಆಗ ಕುಂಟ ಜಿಂಕೆಯು ಸಂತೋಷದಿಂದ ಆಹಾರವನ್ನು ಸವಿಯಿತು. ನಂತರ ಪೂಜಾರಿ ಹೊರಗೆ ಇದ್ದಾಗ ಮೆಲ್ಲನೆ ಹೊರಬಂದ ಕುಂಟಜಿಂಕೆ ಮನೆ ಕಡೆ ಓಡಿತು.

ಮನೆಗೆ ಬಂದ ಕುಂಟ ಜಿಂಕೆಯು ತಾನು ದೇವಸ್ಥಾನಕ್ಕ ಹೋದ ವಿಷಯವನ್ನು ತನ್ನ ಗೆಳೆಯರಿಗೆ ತಿಳಿಸಿತು. ಆಗ ಉಳಿದ ಒಂಬತ್ತು ಜಿಂಕೆಗಳು ದೇವಸ್ಥಾನಕ್ಕೆ ಬಂದವು. ಕುಂಟ ಜಿಂಕೆ ಮಾಡಿದ ಹಾಗೆಯೇ ಮಾಡಿದವು. ಆಗ ಪೂಜಾರಿಗೆ ಅನುಮಾನ ಬಂದಿತು. ಬಾಗಿಲಿನ ಕಿಂಡಿಯಿಂದ ಒಂಬತ್ತು ಜಿಂಕೆಗಳನ್ನು ನೋಡಿದನು. ಕೋಪಗೊಂಡ ಪೂಜಾರಿ ಊರಿನ ಜನರನ್ನು ಕರೆದುಕೊಂಡು ಬಂದು ಜಿಂಕೆಗಳನ್ನು ಹೊಡೆಸಿದನು. ಜಿಂಕೆಗಳಿಗೆ ತಪ್ಪಿನ ಅರಿವಾಗಿ ಕುಂಟ ಜಿಂಕೆಯನ್ನು ತಮ್ಮ ಗೆಳೆಯನನ್ನಾಗಿ ಒಪ್ಪಿಕೊಂಡವು.

– ಎಂ.ಎಂ. ಸಿಂಧು. **8ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ. ಬಸರಕೋಡು. ಹ.ಬೊ.ಹಳ್ಳಿ(ತಾ)

# ಯಶಸ್ಸಿಗೆ ರಹದಾರಿ

ಓರ್ವ ವ್ಯಕ್ತಿ ಜೀವನದಲ್ಲಿ ಯಶಸ್ಸನ್ನು ಸಾಧಿಸಿದ್ದರೆ ಅದರ ಹಿಂದೆ ಆತನ ಅಪಾರ ಪರಿಶ್ರಮ, ತಾಳ್ಮೆ ಮತ್ತು ಶ್ರದ್ದೆಗಳು ಕಾರ್ಯನಿರ್ವಹಿಸುತ್ತವೆ.

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಬದುಕಿನ ಗುರಿಯನ್ನು ಸಾಧಿಸಲು ತನ್ನದೇ ಆದ ಶ್ರಮದ ಕಂದಾಯವನ್ನು ಕಟ್ಟಲೇಬೇಕು. ಪ್ರಾಜ್ಞರು ಹೇಳಿರುವಂತೆ ಯಶಸ್ಸಿಗೆ ಯಾವುದೇ ಅಡ್ಡದಾರಿಗಳಿಲ್ಲ... ಯಶಸ್ಸಿನ ಹಾದಿ ಸುಲಭವಾದದ್ದಲ್ಲ. ಯಶಸ್ಸಿನ ಹಾದಿಯಲ್ಲಿ ಸಾಗಬೇಕಾದರೆ ಹಲವಾರು ಕಷ್ಟಗಳೆಂಬ ಎಡರು ತೊಡರುಗಳನ್ನು ದಾಟಿ, ಬದುಕಿನ ಬವಣೆಗಳನ್ನು ನೀಗಿಕೊಂಡು ಸತತವಾಗಿ ಶ್ರದ್ದೆಯಿಂದ ಗುರಿಯನ್ನು ಬೆಂಬತ್ತಬೇಕು. ಯಾವುದೇ ರೀತಿಯ ಮನರಂಜನೆಗಳಿಗೆ ಅವಕಾಶ ವಿಲ್ಲದ ದಿನಗಳನ್ನು ಕೂಡಕಳೆಯ ಬೇಕಾಗ ಬಹುದು.

ಗುರಿಯನ್ನು ಬೆನ್ನತ್ತಿ ಯಶಸ್ಸನ್ನು ನಮ್ಮದಾಗಿಸಿಕೊಳ್ಳಲು ಈ ಕೆಲವು ಕ್ರಮಗಳನ್ನು ಬದುಕಿನಲ್ಲಿ ನಾವು ಅಳವಡಿಸಿಕೊಳ್ಳಲೇಬೇಕು.

ಸತತ ಪ್ರಯತ್ನ... ಅವನಿಗೇನು ಬಿಡಪ್ಪ! ಚಿನ್ನದ ಚಮಚ ಬಾಯಲ್ಲಿಟ್ಟುಕೊಂಡು ಹುಟ್ಟಿದ್ದಾನೆ ಎಂದು ಬೇರೆಯವರ ಅದೃಷ್ಟದ ಕುರಿತು ಮಾತನಾಡುವ ಸಾಕಷ್ಟು ಜನರನ್ನು ನಾವು ನೋಡಿದ್ದೇವೆ. ಆದರೆ ಕೇವಲ ಅದೃಷ್ಟದ ಬಲವೊಂದರಿಂದಲೇ ಯಾರೂ ಮುಂದೆ ಬರಲು ಸಾಧ್ಯವಿಲ್ಲ. ನಮ್ಮ ಕಠಿಣ ಪರಿಶ್ರಮವೂ ಬೇಕು. ಅದೃಷ್ಟದಲ್ಲಿ ನಂಬಿಕೆ ಇಡುವುದು ಬೇಡ, ನಮ್ಮ ಹಣೆಯಲ್ಲಿ ಬರೆದಂತೆ ಆಗುತ್ತದೆ ಎಂಬ ಅವಾಸ್ತವಿಕ ಪ್ರಜ್ಞೆಯನ್ನು ಒಂದೆಡೆ ಇಟ್ಟು ನಿಮ್ಮ ಗುರಿಯನ್ನು ತಲುಪುವಲ್ಲಿ ಸತತ ಪ್ರಯತ್ನವನ್ನು ಜಾರಿಯಲ್ಲಿಡಿ.

ತಾಳ್ಮೆ... ನಿಮ್ಮ ಗುರಿಯನ್ನು ತಲುಪುವ ಸಮಯದಲ್ಲಿ ನೀವು ತಾಳ್ಮೆಯನ್ನು ಕಳೆದುಕೊಂಡಿದ್ದೇ ಆದರೆ ನೀವು ಯಶಸ್ಸಿನ ಯುದ್ಧದಲ್ಲಿ ಸೋತಂತೆಯೇ ಸರಿ.

ನಿಮ್ಮ ನಿರಂತರ ಪರಿಶ್ರಮದ ಹೊರತಾಗಿಯೂ ನಿಮಗೆ ಮೊದಲ ಹಂತದಲ್ಲಿ ಯಾವುದೇ ಪ್ರತಿಫಲ ದೊರೆಯದೇ ಹೋಗಬಹುದು. ಎರಡನೆಯ ಹಂತದಲ್ಲಿ ತುಸು ಯಶಸ್ಸನ್ನು ಕಾಣಬಹುದು... ಮೂರನೆಯ ಹಂತದಲ್ಲಿ ಯಶಸ್ಸು ನಿಮ್ಮ ಕಾಲ ಬುಡದಲ್ಲಿಯೇ ಇರುತ್ತದೆ. ಆದರೆ ಬಹಳಷ್ಟು ಜನ ತಮ್ಮ ಪ್ರಯತ್ನದಲ್ಲಿ ವಿಫಲರಾದಾಗ ಮೊದಲ ಹಂತದಲ್ಲಿಯೇ ಪ್ರಯತ್ನವನ್ನು ಕೈಬಿಡುತ್ತಾರೆ. ನಿರುತ್ಸಾಹಿಗಳಾಗುತ್ತಾರೆ.ಈ ಹಂತದಲ್ಲಿ ಶತಾಯಗತಾಯ ಅವಡುಗಚ್ಚಿ ಸತತ ಪ್ರಯತ್ನವನ್ನು ಮಾಡಿದರೆ ಮುಂದಿನ ಹಂತವನ್ನು ಖಂಡಿತವಾಗಿಯೂ ತಲುಪಬಹುದು.





ತ್ಯಾಗ... ನೀವು ಬಯಸಿದ ಯಶಸ್ಸನ್ನು ಪಡೆಯಲು ನೀವು ಕೆಲವು ವಸ್ತು ಮತ್ತು ವಿಷಯಗಳನ್ನು ತ್ಯಾಗ ಮಾಡದೆ ಇದ್ದ ಪಕ್ಷದಲ್ಲಿ ನಿಮ್ಮ ಯಶಸ್ಸನ್ನೇ ತ್ಯಾಗ ಮಾಡ ಬೇಕಾಗಬಹುದು. ಪ್ರತಿ ಯೊಂದು ಯಶಸ್ಸಿಗೂ ತನ್ನದೇ ಆದ ಬೆಲೆ ಇದ್ದು, ನೀವು ಬಯಸುವ ಯಶಸ್ಸನ್ನು ಪಡೆಯಲು ನೀವು ಈ ಮೊತ್ತವನ್ನು ತೆರಲೇಬೇಕು. ಈ ಮೊತ್ತ ಹಣದ ರೂಪದಲಿದ್ದರೆ ಶ್ರೀಮಂತರು ಯಶಸ್ಸನ್ನು ತಮ್ಮ ಮನೆಯ ಮೂಲೆಯಲ್ಲಿ ಕಟ್ಟಿ ಹಾಕಬಹುದಿತ್ತು. ಆದರೆ ಯಶಸ್ಸು ಬಯಸುವ ಮೊತ್ತ ನಿಮ್ಮ ಶ್ರದ್ದೆ, ಸಮಯ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಪ್ರಜ್ಞೆ,ಮತ್ತು ಶಿಸ್ತಿನ ಜೀವನ ಶೈಲಿಯನ್ನು.. ಯಶಸ್ಸನ್ನು ಪಡೆಯಲು ನೀವು ಸ್ನೇಹಿತರ ಜೊತೆಗಿನ ಹರಟೆ, ಮನರಂಜನೆ, ಸುತ್ತಾಟಗಳನ್ನು ತ್ಯಾಗ ಮಾಡಲೇಬೇಕು.

ಸ್ಥಿರತೆ... ಓರ್ವ ಸಾಮಾನ್ಯ ಮನುಷ್ಯನನ್ನು ಕೂಡ ಅತ್ಯುತ್ತಮ ವ್ಯಕ್ತಿಯನ್ನಾಗಿಸುವುದು ಆತನ ಸ್ಥಿರತೆ ಮಾತ್ರ. ಅಸಾಧಾರಣ ಯಶಸ್ಸನ್ನು ನಮ್ಮದಾಗಿಸಿಕೊಳ್ಳಲು ನಮ್ಮಲ್ಲಿ ಸ್ಥಿರತೆ ಮತ್ತು ಬದ್ಧತೆಗಳು ಖಂಡಿತವಾಗಿಯೂ ಇರಲೇಬೇಕು.

ತನ್ನ ನಡೆ – ನುಡಿಗಳಲ್ಲಿ, ಮಾಡುವ ಕಾರ್ಯದಲ್ಲಿ ಬದುಕಿನ ಎಲ್ಲಾ ಹಂತಗಳಲ್ಲಿಯೂ ಸ್ಥಿರತೆಯನ್ನು ಕಾಯ್ದುಕೊಳ್ಳುವ ವ್ಯಕ್ತಿ ಖಂಡಿತ ವಾಗಿಯೂ ಯಶಸ್ಸನ್ನು ಗಳಿಸುತ್ತಾನೆ.

ಸ್ವಯಂ ಶಿಸ್ತು.... ಯಶಸ್ವಿ ಜೀವನಕ್ಕೆ ಬೇಕಾಗಿರುವುದು ಶಿಸ್ತು ಬದ್ಧ ಜೀವನ. ದೈನಂದಿನ ಬದುಕಿನಲ್ಲಿ ಕರಾರುವಾಕ್ಕಾಗಿ ಏಳುವ, ತನ್ನ ನಿತ್ಯ ವಿಧಿಗಳನ್ನು ಪೂರೈಸುವ ಮತ್ತು ತನ್ನ ಗುರಿಯನ್ನು

ತಲುಪುವ ಹಾದಿಯಲ್ಲಿ ಕಾರ್ಯಗಳನ್ನು ನಿರ್ವಹಿಸುವ ವ್ಯಕ್ತಿಯು ತನ್ನ ಬದುಕಿನಲ್ಲಿ ಅಳವಡಿಸಿಕೊಂಡಿರುವ ಶಿಸ್ತಿನ ಜೀವನ ಶೈಲಿ ಯಶಸ್ಸಿಗೆ ಉತ್ತಮ ಅಡಿಪಾಯವಾಗಿರುತ್ತದೆ.

ಯಾವಾಗಲೋ ಎದ್ದು, ಏನನ್ನೋ ತಿಂದು, ಹೇಗೆ ಹೇಗೋ ಬದುಕುವವರು ಬದುಕಿನಲ್ಲಿ ಯಶಸ್ಸನ್ನು ಕಾಣಲು ಸಾಧ್ಯವಾಗದೇ ಇರುವುದಕ್ಕೆ ಕಾರಣ ಅವರು ರೂಢಿಸಿಕೊಂಡಿರುವ ಅಶಿಸ್ತಿನ ಜೀವನ.

ಸತತ ಪ್ರಯತ್ನ... ಅದೆಷ್ಟೇ ಸೋಲು ನಮ್ಮನ್ನು ಪದೇಪದೇ ಕಂಗೆಡಿಸಿದರೂ ಮರಳಿ ಯತ್ನವ ಮಾಡು ಎಂಬ ಮಾತಿನಂತೆ ನಾವು ನಮ್ಮ ಶ್ರಮವನ್ನು ಜಾರಿಯಲ್ಲಿಡಬೇಕು. ತಾಳ್ಮೆ ಕಳೆದುಕೊಳ್ಳದೆ, ಉತ್ಸಾಹವನ್ನು ಮತ್ತೆ ಚಿಗುರಿಸಿಕೊಂಡು, ಸಂಯಮವನ್ನು ರೂಢಿಸಿಕೊಂಡು ಯಶಸ್ಸಿನ ಹಾದಿಯ ಪಯಣವನ್ನು ಅದ್ಭುತವಾಗಿ ಅನುಭವಿಸುತ್ತಾ ಸಾಗಬೇಕು.

ಯಶಸ್ಸಿನ ಸುತ್ತ ತುದಿಯಲ್ಲಿ ನಿಂತಾಗ ಆಗುವ ಸಂತೋಷಕ್ಕಿಂತ ಸಾಗಿ ಬಂದ ಪಯಣದ ಹಾದಿ ಬಹಳ ರಮ್ಯವೆನಿಸುತ್ತದೆ. ಏನೆಲ್ಲಾ ಪ್ರಯತ್ನಗಳನ್ನು ಮಾಡಿಯೂ ಕೂಡ ಯಶಸ್ಸು ದಕ್ಕದೆ ಹೋದರೆ ಚಿಂತಿಸುತ್ತ ಕೂಡುವ ಅವಶ್ಯಕತೆ ಇಲ್ಲ. ಯಶಸ್ಸಿನ ಹಾದಿಯಲ್ಲಿ ನಡೆವಾಗಿನ ಪಯಣದ ಅನುಭವಗಳು ಬದುಕಿಗೆ ಬಹುದೊಡ್ಡ ಬುತ್ತಿಯನ್ನು ಕಟ್ಟಿಕೊಡುತ್ತವೆ. ಅನುಭವಗಳನ್ನು ಹಣ ಕೊಟ್ಟು ಕೊಂಡುಕೊಳ್ಳಲು ಆಗುವುದಿಲ್ಲ, ಅನುಭವಿಸಿಯೇ ಅರಿಯಬೇಕು.

ಬದುಕಿನಲ್ಲಿ ಸ್ವಯಂ ಶಿಸ್ತನ್ನು ಅಳವಡಿಸಿಕೊಂಡು, ಕೆಲವು ವಿಷಯಗಳನ್ನು ತ್ಯಾಗ ಮಾಡಿ ಮತ್ತೆ ಕೆಲವನ್ನು ಬದುಕಿನ ಭಾಗವಾಗಿಸಿಕೊಂಡು ನಿರಂತರ ಶ್ರದ್ದೆ, ಪರಿಶ್ರಮ ಮತ್ತು ತಾಳ್ಮೆಯಿಂದ ಗುರಿಯಡೆಗೆ ಸಾಗಿದರೆ ಯಶಸ್ಸು ಖಂಡಿತವಾಗಿಯೂ ದಕ್ಕುತ್ತದೆ. ಅಂತಹ ಯಶಸ್ಸು ನಿಮ್ಮದಾಗಲಿ ಎಂದು ಹಾರೈಸುವ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಮನಸ್ಸಿನ ಏಕಾಗ್ರತೆಗೆ ಡಿಜಿಟಲ್ ಉಪವಾಸವೂ ಅನಿವಾರ್ಯ

ಮೊಬೈಲ್ ಇಲ್ಲದೇ ಜೀವನ ನಡೆಸುವುದು ಅಸಾಧ್ಯವೇ? ಎಂದು ಯಾರನ್ನಾದರೂ ಪ್ರಶ್ನಿಸಿದಾಗ ಹೌದು ಅಸಾಧ್ಯವೆಂದೇ ಹೇಳುತ್ತಾರೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಈ ಮೊಬೈಲ್ ಎಂಬ ಸಾಧನ ನಮ್ಮ ನಿತ್ಯದ ಜೀವನವನ್ನು ಅಷ್ಟೊಂದು ಪ್ರಭಾವಿಸಿದೆ ಎಂದು ಹೇಳಬಹುದು. ಮುಂದುವರೆದು, ಈ ಹಿಂದೆ ಮೊಬೈಲ್ ಆವಿಷ್ಕಾರವಾಗುವ ಮೊದಲು ನಮ್ಮ ದೈನಂದಿನ ಜೀವನ ಸುಖಕರವಾಗಿತ್ತಲ್ಲವೇ? ಜೀವನ ನಡೆಸುವುದಕ್ಕೆ ಏನಾದರೂ ಅಡೆತಡೆಗಳಿದ್ದವೇ? ಎಂದು ಅವಲೋಕಿಸಿದಾಗ ಯಾವ ಅಡೆತಡೆಗಳಿಲ್ಲದೇ, ಅತ್ಯಂತ ಸುಖಕರವಾದ ಸಂತೃಪ್ತಿ ಜೀವನವನ್ನು ಅಂದು ಕೂಡ ನಡೆಸುತ್ತಿದ್ದೆವು ಎಂಬುದೇ ನಮ್ಮ ಉತ್ತರವಾಗಲಿದೆ. ಹಾಗಾದರೆ ಮೊಬೈಲ್ ಬಳಕೆಯಲ್ಲಿ ಸಮಸ್ಯೆ ಇರುವುದೆಲ್ಲಿ? ಎಂದು ಪ್ರಶ್ನಿಸಿದಾಗ ಅದನ್ನು ಅವಶ್ಯಕತೆಗೆ ತಕ್ಕಂತೆ ಹಿತಮಿತವಾಗಿ ಬಳಸ ಬೇಕೆನ್ನುವುದು. ವಿಜ್ಞಾನದ ಅದ್ಭುತವಾದ ಆವಿಷ್ಕಾರಗಳು ಇಂದು ಮಾನವನ ಜೀವನವನ್ನು ಸಾಕಷ್ಟು ಪ್ರಭಾವಿಸಿವೆ. ಅದರಲ್ಲಿ ಮೊಬೈಲ್ ಆವಿಷ್ಕಾರವೂ ಒಂದು. ಆದರೆ ಯಂತ್ರಗಳ ಮೇಲಿನ ಅತೀಯಾದ ಅವಲಂಬನೆಯಿಂದ ಮಾತ್ರ ಹಲವಾರು ದುಷ್ಪರಿಣಾಮಗಳು ಉದ್ಭವಿಸಿದವು ಎಂದು ಹೇಳಬಹುದು. ಯಾವ ಸಾಧನಗಳನ್ನು ಮನುಷ್ಯ ಆವಿಷ್ಕರಿಸಿದನೋ ಅವು ಅವನ ನಿಯಂತ್ರಣದಲ್ಲಿರಬೇಕಾಗಿತ್ತು, ಆದರೆ ಆ ಸಾಧನಗಳಿಗೆ ದಾಸನಾಗಿ ಅವುಗಳೇ



ರಾಜು. ಭೂಶೆಟ್ಟಿ
ಲೇಖಕರು, ಹುಬ್ಬಳ್ಳಿ

Scan For Digital Colourful
HAMPI TIMES E-paper

ಮನುಷ್ಯನನ್ನು ನಿಯಂತ್ರಿಸುವ ಮಟ್ಟಿಗೆ ಹೋಗಿರುವುದು ಮಾತ್ರ ನೋವಿನ ಸಂಗತಿಯಾಗಿದೆ.

ಮೊಬೈಲ್ ವ್ಯಸನದಿಂದಾಗಿ ಹಲವಾರು ಸಮಸ್ಯೆಗಳು ಉದ್ಭವಿಸಿದ್ದು, ಕೆಲವುಗಳನ್ನು ಹೆಸರಿಸುವುದಾದರೆ ಏಕಾಗ್ರತೆಯ ಕೊರತೆ, ಸೃಜನಶೀಲತೆಯ ಕೊರತೆ, ದೈಹಿಕ ಅನಾರೋಗ್ಯ, ನಿದ್ರಾಹೀನತೆ, ಕೆಲಸ ಕಾರ್ಯಗಳನ್ನು ಮುಂದೂಡುವುದು, ಏಕಾಂಗಿತನ ಹೀಗೆ ಪಟ್ಟಿ ಮಾಡುತ್ತಾ ಸಾಗಿದರೆ ಅದಕ್ಕೆ ಅಂತ್ಯವಿಲ್ಲವೆಂದೇ ಹೇಳಬಹುದು. ಮೊಬೈಲ್ ಚಾರ್ಜಿಂಗ್ ಇಟ್ಟಾಗ ಅದು ಪೂರ್ಣವಾಗಿ ಚಾರ್ಜ ಆಗಲು ಕೂಡ ಬಿಡದೇ ಹತ್ತು ಬಾರಿ ಹೋಗಿ ಯಾರಾದರೂ ಕರೆ ಮಡಿದ್ರಾ? ಮೆಸೆಜ್ ಮಾಡಿದ್ರಾ? ಎಂದು ಪರೀಕ್ಷಿಸುವುದು, ಸೊಶಿಯಲ್ ಮೀಡಿಯಾದಲ್ಲಿ ಯಾವುದಾದರೂ ಪೋಸ್ಟ್ ಮಾಡಿದಾಗ ಅದಕ್ಕೆ ಎಷ್ಟು ಲೈಕ್ಸ್ ಬಂದಿವೆ? ಕಮೆಂಟ್ಸ ಬಂದಿವೆ? ಎಂದು ಪದೇ ಪದೇ ನೋಡುವುದು ಇವೆಲ್ಲವೂ ಕೂಡ ಮೊಬೈಲ್ ವ್ಯಸನಿಗಳಾಗುತ್ತಿರುವುದರ ಸಂಕೇತಗಳೇ ಆಗಿರುತ್ತವೆ. ಒಂದು ವೇಳೆ ಲೈಕ್ಸ್ ಮತ್ತು ಕಮೆಂಟ್ಸ ಕಡಿಮೆಯಾದರೆ ಮಾನಸಿಕವಾಗಿ ಕುಗ್ಗಿ ಹೋಗುವುದರ ಜೊತೆಗೆ ಖಿನ್ನತೆಗೆ ಒಳಗಾಗುವ ಸಾಧ್ಯತೆಯೂ ಹೆಚ್ಚಾಗಿರುತ್ತದೆ. ಹಾಗಾದರೆ ಈ ಎಲ್ಲ ಸಮಸ್ಯೆಗಳಿಗೆ ಒಂದೇ ಪರಿಹಾರವೆಂದರೆ ಅದುವೇ ಡಿಜಿಟಲ್ ಉಪವಾಸವೆಂದು ಹೇಳಬಹುದು.

ಡಿಜಿಟಲ್ ಉಪವಾಸವೆಂದರೆ ನಿಗದಿತ ಸಮಯದವರೆಗೆ ಡಿಜಿಟಲ್ ಸಾಧನಗಳು ಮತ್ತು ಇಂಟರ್ನೆಟ್ ಅನ್ನು ಬಳಸುವುದರಿಂದ ಸ್ವಯಂಪ್ರೇರಣೆಯಿಂದ ದೂರವಿರುವುದಾಗಿದೆ. ಯಾವುದೇ ಚಟವನ್ನು ಏಕಾಏಕಿ ಬಿಡಲಾಗದು. ಇದಕ್ಕೆ ಸಂಕಲ್ಪದ ಅಗತ್ಯವಿದೆ. ಹೀಗಾಗಿ ಈ ಅಭ್ಯಾಸವನ್ನು ಮೊದಲು ಕೆಲವು ನಿಮಿಷಗಳಿಂದ ಆರಂಭಿಸಿ ಅಗತ್ಯಕ್ಕೆ ತಕ್ಕಂತೆ ಹಲವಾರು ಗಂಟೆಗಳವರೆಗೂ ವಿಸ್ತರಿಸುತ್ತಾ ಸಾಗಬಹುದು. ಕಾಲಕ್ರಮೇಣ ವಾರದಲ್ಲಿ ಒಂದು ದಿನ ಮೊಬೈಲ್ ಬಳಸದೇ ಇರುವ ದೃಢ ಸಂಕಲ್ಪ ಮಾಡುವುದು. ಅಂದು ಮನೆಯ ಕುಟುಂಬದ ಸದಸ್ಯರೊಂದಿಗೆ ಬೆರೆತು ಅನ್ಯೋನ್ಯವಾಗಿ ಮಾತನಾಡಲು ನಿರ್ಧರಿಸುವುದು. ತಂತ್ರಜ್ಞಾನದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುತ್ತದೆ ಮತ್ತು ಮಾಡುವ ಕೆಲಸದಲ್ಲಿ ಏಕಾಗ್ರತೆಯನ್ನು ಸಾಧಿಸಲು ಕೂಡ ಸಹಾಯ ಮಾಡುತ್ತದೆ. ಆನ್‌ಲೈನ್ ವಿಷಯಗಳಿಗೆ ನಿರಂತರವಾಗಿ ಒಡ್ಡಿಕೊಳ್ಳುವಿಕೆಯು ಹಲವಾರು ರೀತಿಯ ಆತಂಕ, ಒತ್ತಡ, ಅಸರ್ಪಕತೆಯ ಭಾವನೆಗಳಿಗೆ ಕಾರಣವಾಗಬಹುದು. ಹೀಗಾಗಿ ಅದರಿಂದ ದೂರವಿರುವುದು ನಕಾರಾತ್ಮಕ ಭಾವನೆಗಳನ್ನು ನಿವಾರಿಸಲು, ಆರೋಗ್ಯಕರ ಮಾನಸಿಕ ಸ್ಥಿತಿಯನ್ನು ಬೆಳೆಸಿಕೊಳ್ಳಲು ನಮಗೆ ಸಾಹಯ ಮಾಡುತ್ತದೆ. ಡಿಜಿಟಲ್ ಉಪವಾಸವು ನಮ್ಮ ಕಣ್ಣುಗಳು ಮತ್ತು ಮನಸ್ಸಿಗೆ ವಿರಾಮವನ್ನು ನೀಡುವುದರಿಂದ ಸುಖಕರವಾದ ನಿದ್ರೆ ಮಾಡಲು ಸಹಾಯಕವಾಗಿದೆ. ಆ ಮೂಲಕ ದೇಹಕ್ಕೆ ಉತ್ತಮ ವಿಶ್ರಾಂತಿಯೂ ಲಭ್ಯವಾಗುತ್ತದೆ. ನೈಜ ಪ್ರಪಂಚದೊಂದಿಗೆ ನಮ್ಮನ್ನು ನಾವು ಮರು ತೊಡಗಿಸಿಕೊಳ್ಳಲು, ಮಾನವೀಯ ಸಂಬಂಧಗಳನ್ನು ಗಟ್ಟಿಯಾಗಿ ಬೆಸೆಯಲು ಉತ್ತೇಜಿಸುತ್ತದೆ. ಡಿಜಿಟಲ್ ಉಪವಾಸವು ನಮ್ಮನ್ನು ಹೆಚ್ಚು ಪ್ರಸ್ತುತಗೊಳಿಸುತ್ತದೆ. ಅಂದರೆ ನಮ್ಮ ಸುತ್ತಮುತ್ತಲು ನಡೆಯುವ ಹಲವಾರು ಸಣ್ಣಪುಟ್ಟ ವಿಷಯಗಳಲ್ಲಿಯೂ ಸಂತೋಷವನ್ನು ಹುಡುಕುವಂತೆ ಮಾಡುತ್ತದೆ. ಉದಾಹರಣೆಗೆ ಪ್ರಕೃತಿಯ ಸೌಂದರ್ಯವನ್ನು ಅನುಭವಿಸುವುದು. ಅಂತರ್ಗತವಾಗಿರುವ ಸೃಜನಶೀಲತೆಯ ಚಿಂತನೆಗಳು ಹೊರಬರಲು ಕೂಡ ಪ್ರೇರೇಪಿಸುತ್ತದೆ. ಹೊರಾಂಗಣ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮನಸ್ಸು ಚಿಂತನೆ ನಡೆಸುವುದರಿಂದ ದೈಹಿಕ ಆರೋಗ್ಯವೂ ಸುಧಾರಿಸಬಲ್ಲದು. ಪುಸ್ತಕಗಳನ್ನು ಓದಬೇಕೆಂಬುವ ಹವ್ಯಾಸವೂ ವೃದ್ಧಿಯಾಗುತ್ತದೆ.

ಒಟ್ಟಾರೆಯಾಗಿ ನಾವು ಆರೋಗ್ಯವಾಗಿರಬೇಕೆಂದರೆ ಆಹಾರವನ್ನು ಮಿತಗೊಳಿಸಿ ಹೇಗೆ ಉಪವಾಸವನ್ನು ಕೈಗೊಳ್ಳುತ್ತೇವೆಯೋ ಹಾಗೆಯೇ ಉತ್ತಮ ಆರೋಗ್ಯಕ್ಕಾಗಿ ಡಿಜಿಟಲ್ ಉಪವಾಸವೂ ಕೂಡ ಅಷ್ಟೇ ಮಹತ್ವದ ಸಂಗತಿ ಎಂಬುದನ್ನು ಮರೆಯದಿರೋಣ. ದಿನಕ್ಕೆ ಕೆಲವು ಗಂಟೆ ಅಥವಾ ವಾರಕ್ಕೊಮ್ಮೆಯಾಗಲಿ, ನಮ್ಮ ಅನುಕೂಲತೆಗೆ ತಕ್ಕಂತೆ ಸಮಯವನ್ನು ಹೊಂದಾಣಿಕೆ ಮಾಡಿಕೊಂಡು ಡಿಜಿಟಲ್ ಉಪವಾಸವನ್ನು ಅಳವಡಿಸಿಕೊಳ್ಳುವುದರತ್ತ ಚಿಂತಿಸೋಣವೇ?

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಎಸ್.ಡಿ.ಎಂ.ಸಿ ಸದಸ್ಯರಿಗೆ ಸಹಾಯ ಮಾಡುವ ಅವಕಾಶವನ್ನು ಸರ್ಕಾರ ಕಾನೂನಿನ ಮೂಲಕ ಕಲ್ಪಿಸಿಕೊಟ್ಟಿದೆ

# ಸರ್ಕಾರಿ ಶಾಲಾ ಅಭಿವೃದ್ಧಿ ಆಡಳಿತದಲ್ಲಿ ಎಸ್.ಡಿ.ಎಂ.ಸಿ. ವರವೋ, ಶಾಪವೋ?

## ಶಾಲಾ ಅಭಿವೃದ್ಧಿಯಲ್ಲಿ ಎಸ್‌ಡಿಎಂಸಿ ಪಾತ್ರ | ಬಹುತೇಕ ಕಡೆ ದಾನ ಮರೆತು ಅನುದಾನದತ್ತ ಚಿತ್ತ

ನಮ್ಮ ಮಕ್ಕಳ ಏಳಿಗೆಗಾಗಿಯೇ ಸರ್ಕಾರ ಉತ್ತಮ ಧ್ಯೇಯೊದ್ದೇಶಗಳನ್ನಿಟ್ಟುಕೊಂಡು ಶಾಲೆಗಳೆ ಎಸ್‌ಡಿಎಂಸಿಗಳ ರಚನೆ ಮಾಡಲಾ ಯಿತು. ಆರಂಭದಲ್ಲಿ ಎಸ್‌ಡಿಎಂಸಿಗಳು ಒಳ್ಳೆಯ ಸದ್ದನ್ನು ಮಾಡಿದವು. ಯಾವಾಗ ಎಸ್‌ಎಸ್‌ಎ ಹಣ ಅನುದಾನದ ರೂಪದಲ್ಲಿ ಶಾಲೆಗಳಿಗೆ ಬರತೊಡಗಿತೋ, ಕಟ್ಟಡದ ಹಣ ಯಾವಾಗ ಶಾಲಾ ಖಾತೆಗೆ ಜಮೆ ಆಗತೊಡಗಿತೋ ಇಡೀ ಎಸ್‌ಡಿಎಂಸಿಯ ಚಿತ್ರಣವೇ ಬದಲಾಯಿತು. ಬಹುತೇಕರು ಶಾಲೆಗಳ ಅನುದಾನದತ್ತ ಚಿತ್ತ ಹರಿಸಿ ಎಸ್‌ಡಿಎಂಸಿಯ ಅಂದವಾದ ಚಿತ್ರಣವನ್ನೇ ಕುರೂಪಗೊಳಿಸಿದರು. ಯಾವಾಗ ಶಾಲೆಗಳಿಗೆ ಹಣ ಬಂತೋ ಹಣದ ಜೊತೆ ರಾಜಕೀಯವೂ ಪ್ರವೇಶವಾಯ್ತು. ಅಧ್ಯಕ್ಷ ಸದಸ್ಯ ಪದವಿಗಾಗಿ ಲಾಬಿಗಳು ನಡೆಯತೊಡಗಿದವು. ಆಯಾ ಕ್ಷೇತ್ರದ ಶಾಸಕರುಗಳು ತಮ್ಮ ಹಿಂಬಾಲಕರನ್ನು ಶಾಲೆಯತ್ತ ಛೂ ಬಿಟ್ಟರು.ಅಲ್ಲಿಗೆ ಶಿಕ್ಷಕರ ಸ್ವಾಸ್ಥ್ಯ ಹದಗೆಟ್ಟಿತು.

ಕೆಲಕಡೆ ಹೇಳತೀರದಷ್ಟು ಅಸಹ್ಯವಾಗಿ ಎಸ್‌ಡಿಎಂಸಿ ಅಧ್ಯಕ್ಷರು ಸದಸ್ಯರು ವರ್ತಿಸತೊಡಗಿದರು.ಅವರ ವರ್ತನೆ ಅವರು ಶಿಕ್ಷಕರ ಬಗ್ಗೆ ಬಳಸುವ ಭಾಷೆ,ಶಾಲಾ ಶಿಕ್ಷಕರಿಗೆ ಅವರ ಮಿತಿ ಮೀರಿದ ಕಿರುಕುಳ ದಿನೇದಿನೇ ಹೆಚ್ಚತೊಡಗಿತು.ಬಳ್ಳಾರಿ ಜಿಲ್ಲೆಯ ಒಂದು ತಾಲೂಕಿನ ಗ್ರಾಮದಲ್ಲಿ ಓರ್ವ ಎಸ್ ಡಿ ಎಂ ಸಿ ಅಧ್ಯಕ್ಷ ಶಾಲಾ ಶಿಕ್ಷಕಿಯೋರ್ವರ ಬಗ್ಗೆ ಮುಖ್ಯಗುರುಗಳ ಜೊತೆ ಸೊಂಟದ ಕೆಳಗಿನ ಭಾಷೆ ಮಾತನಾಡಿದ ಧ್ವನಿ ಮುದ್ರಣವನ್ನು ನಾನು ಕೇಳಿಸಿಕೊಂಡಿದ್ದೇನೆ,ತೀರಾ ಅಸಹ್ಯ ಭಾಷೆ ಬಳಸಿ ಮಾತನಾಡಿದ ಅತ ಶಿಕ್ಷಕರನ್ನು ತನ್ನ ಮನೆಯ ಜೀತದವರಂತೆ ಮರ್ಯಾದೆಗೆಟ್ಟು ಅಶ್ಲೀಲವಾಗಿ ಮಾತನಾಡಿದ್ದಾನೆ.ಈ ಪ್ರಕರಣ ಒಂದು ಉದಾಹರಣೆಯಷ್ಟೇ,ಇಂತಹ ಸಾವಿರಾರು ಉದಾಹರಣೆಗಳು ನಮ್ಮ ಬಹುತೇಕ ಶಾಲೆಗಳಲ್ಲಿ ಕಾಣಸಿಗುತ್ತವೆ.

ಶಾಲಾ ಅಭಿವೃದ್ಧಿ ಸಮಿತಿ ತನ್ನ ಮೇರೆಸೀಮೆಗಳನ್ನರಿಯದೇ ವರ್ತಿಸಿದ ಸಂದರ್ಭದಲ್ಲಿ ಕೆಲ ಶಿಕ್ಷಕರು ,ಮುಖ್ಯಶಿಕ್ಷಕರು ಅವರುಗಳ ಹೆಸರು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳು ಸಹ ಸಿಗುತ್ತವೆ..ಅತಿ ಹೆಚ್ಚು ಎಸ್ ಡಿ ಎಂಸಿ ಶೋಷಣೆಗೆ ಒಳಗಾದವರೆಂದರೆ ನಮ್ಮ ಹೈದರಾಬಾದ್ ಕರ್ನಾಟಕ ಭಾಗದ ಶಿಕ್ಷಕರು..

ಯಾವ ಮಟ್ಟಿಗೆ ಅಂದರೆ ಎಸ್‌ಡಿಎಂಸಿ ರದ್ದು ಮಾಡಿ ಇಲ್ಲವೇ ಕಾಯ್ದೆ ತಿದ್ದುಪಡಿ ಮಾಡಿ ಎನ್ನುವಷ್ಟರ ಮಟ್ಟಿಗೆ ಶಿಕ್ಷಕರು ರೋಸಿ ಹೋಗಿದ್ದಾರೆ. ಎಸ್‌ಡಿಎಂಸಿ ಅನುದಾನಗಳನ್ನು ಕಬಳಿಸಿದ ಅನೇಕ ಉದಾಹರಣೆಗಳಿವೆ,ಇಂತಹ ಅನೇಕ ಪ್ರಕಾಣಗಳಲ್ಲಿ ಶಾಲಾ ಮುಖ್ಯಗುರುಗಳು ಸಹ ಶಾಮೀಲಾಗಿರುವ ಬಹಳಷ್ಟು ಪ್ರಕರಣಗಳು ಪೋಲೀಸ್ ಸ್ಟೇಷನ್, ಕೋರ್ಟ್ ಹಂತದಲ್ಲಿ, ಬಿಇಓ, ಡಿಡಿಪಿಐ ಕಚೇರಿಯಲ್ಲಿ ಬಾಕಿ ಇವೆ.. ಇಂತಹ ಗ್ರಾಮದಲ್ಲಿ ಎಸ್‌ಡಿಎಂಸಿ ಕಿರುಕುಳ ಇದೆ ಅಂತ ತಿಳಿದರೆ ಅಂತಹ ಊರಿಗೆ ಬರಲು ಶಿಕ್ಷಕರು ಹಿಂದೇಟು ಹಾಕುತ್ತಾರೆ, ಹೀಗಾದರೆ ಅಲ್ಲಿನ ವಿದ್ಯಾರ್ಥಿಗಳ ಗತಿಯೇನು? ಎಂಬುದು ಆಲೋಚಿಸಬೇಕಾದ ವಿಷಯ



### ಎಸ್‌ಡಿಎಂಸಿ ಹೇಗಿರಬೇಕು ?

1. ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು ತಮ್ಮ ಮೇರೆ ಸೀಮೆಗಳನ್ನರಿತು ತಮ್ಮೂರಿನ ತಮ್ಮ ಮಕ್ಕಳಿಗೆ ಕಲಿಸಲು ಬರುವ ಶಿಕ್ಷಕರ ಜೊತೆ ಸೌಜನ್ಯದಿಂದ ವರ್ತಿಸುವುದನ್ನು ಕಲಿಯಬೇಕು

2. ಎಸ್‌ಡಿಎಂಸಿ ಯು ಶಾಲೆಯ ಪ್ರಗತಿ ಗಾಗಿ ಕ್ರಮಿಸುವ ಕಮಿಟಿ ಎಂಬುದನ್ನು ಅಧ್ಯಕ್ಷರು ಹಾಗೂ ಸದಸ್ಯರುಗಳು ಮನಗಾಣಬೇಕು

3. ಶಾಲೆಯ ಶಿಕ್ಷಕರ ಜೊತೆ ಚರ್ಚಿಸಿ ಮಕ್ಕಳ ಕಲಿಕೆಗೆ ಪೂರಕವಾಗಿ ವಿನೂತನ ಪ್ರೋತ್ಸಾಹಕ ಕಾರ್ಯಕ್ರಮ ಗಳನ್ನು ಹಮ್ಮಿ ಕೊಳ್ಳಲು ಸಹಕರಿಸಬೇಕು, ಶಾಲೆಯ ಗ್ರಂಥಾಲಯವನ್ನು ಸಮೃದ್ಧಿ ಗೊಳಿಸುವುದು, ಶಾಲಾ ಕೈ ತೋಟ ನಿರ್ಮಿಸುವುದು, ಶಾಲೆಯ ಅಂದ ಚಂದಕ್ಕೆ ಶ್ರಮಿ ಸುವುದು, ಶಾಲೆಯ ಕುಂದು ಕೊರತೆಗಳತ್ತ ಗಮನ ಹರಿಸಿ ಗ್ರಾಮ ಪಂಚಾ ಯತ್ ,ಪಟ್ಟಣ ಪಂಚಾಯ್ ಹಾಗೂ ಜನಪ್ರತಿ ನಿಧಿಗಳ ಸಹಕಾರದಿಂದ ಕುಂದುಕೊರತೆ ಗಳನ್ನು ನೀಗಿಸುವ ಕಾರ್ಯ ಗಳನ್ನು ಮಾಡಬೇಕಿದೆ.



ಮಹಿಮ

ವಿಶ್ರಾಂತ ಉಪನಿರ್ದೇಶಕರು, ರಾಯಚೂರು

Scan For Digital Colourful HAMPI TIMES E-paper

4. ಕೆಲ ಎಸ್‌ಡಿಎಂಸಿ ಗಳು ಪರೀಕ್ಷೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವುದರ ಜೊತೆಗೆ ಮುಂದಿನ ವಿದ್ಯಾಭ್ಯಾಸಕ್ಕೆ ಆರ್ಥಿಕ ಸಹಾಯ ಮಾಡುವ ಹೊಣೆಗಾರಿಕೆಯನ್ನು ಅದು ನಿಭಾಯಿಸ ಬೇಕಾದ ಅಗತ್ಯತೆ ಇದೆ

5. ಶ್ರೀಯುತರಾದ ಹಾಜಬ್ಬನವರು ಕಿತ್ತಳೆ ಹಣ್ಣು ಮಾರಿ ಶಾಲಾ ಕಟ್ಟಡ ಕಟ್ಟಿಸಿದ್ದನ್ನು ನಮ್ಮ ಎಸ್ ಡಿ ಎಂ ಸಿಗಳು ಮನಗಾಣಬೇಕು. ಯಾವ ಪದವಿಯನ್ನು ಬಯಸದೇ ನನ್ನೂರಿನ ಮಕ್ಕಳು ಕಲಿಯಬೇಕೆಂಬ ಉತ್ಕಟೇಚ್ಛೆ ಯಿಂದ ತೀರಾ ಬಡವರಾದ ಶ್ರೀ ಹಾಜಬ್ಬನವರು ತಮ್ಮ ಶಕ್ತಿ ಮೀರಿ ಕಿತ್ತಳೆ ಹಣ್ಣು ಮಾರಿ ಬಂದ ಹಣದಿಂದ ,ತಮ್ಮ ಸ್ವಯಂ ಶಕ್ತಿಯಿಂದ ಶಾಲಾ ಕಟ್ಟಡ ನಿರ್ಮಿಸಲು ತ್ಯಾಗ ಮಾಡಿದ್ದನ್ನು ಎಲ್ಲಾ ಎಸ್‌ಡಿಎಂಸಿಗಳು ಅರಿತುಕೊಳ್ಳಬೇಕು .ಹಾಜಬ್ಬನವರಂತಹ ಮನಸ್ಥಿತಿ, ಕಳಕಳಿ ನಮ್ಮ್ ಎಸ್‌ಡಿಎಂಸಿಗಳಿಗೆ ಬರಬೇಕಿದೆ

6. ಶಾಲಾ ಅನುದಾನವನ್ನು ಸಮರ್ಪಕ ರೀತಿಯಲ್ಲಿ ಖರ್ಚು ಮಾಡಿ ವಿದ್ಯಾರ್ಥಿಗಳಿಗೆ ಸಲ್ಲಬೇಕಾದ ಸೌಲಭ್ಯಗಳನ್ನು ಅವರಿಗೆ ಪ್ರಾಮಾಣಿಕವಾಗಿ ತಲುಪಿಸುವುದು ಅವರ ಧರ್ಮವಾಗಬೇಕು..

7. ಶಾಲೆಗೆ ಅಗತ್ಯವಿರುವ ಮೇಜು ಟೇಬಲ್ ಕುರ್ಚಿ,ಪ್ರಯೋಗಶಾಲೆಗೆ ಬೇಕಾದ ವಸ್ತುಗಳನ್ನು, ಧ್ವನಿವರ್ಧಕ ,ಮ್ಯಾಪ್ ಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಶಾಲೆಗೆ ದೇಣಿಗೆ ನೀಡುವ ಮನಸ್ಸು ಮಾಡಬೇಕು

8. ಕೆಲ ಮಹನೀಯರುಗಳು ಶಾಲೆಗಳಿಗೆ ಪ್ಲೇಟ್‌ಗಳನ್ನು ಲೋಟಗಳನ್ನು, ನೋಟ್ ಬುಕ್ ಗಳನ್ನು ದೇಣಿಗೆಯಾಗಿ ನೀಡುತ್ತಿದ್ದಾರೆ. ಅಂತಹ ದಾನಿಗಳ ಬದಲಿಗೆ ಎಸ್‌ಡಿಎಂಸಿಗಳೇ ದಾನಿಗಳಾಗುವುದು ಒಳಿತು.

9. ಎಸ್‌ಡಿಎಂಸಿಗಳು ರಾಜಕೀಯದ ಕೊಳಕನ್ನು ಮೆತ್ತಿಕೊಂಡು ವಿದ್ಯಾದೇಗುಲವನ್ನು ಪ್ರವೇಶಿಸಬಾರದು,ಶಾಲೆಯನ್ನು ದೇಗುಲವೆಂದೇ ಪರಿಗಣಿಸಿ,ತ್ಮ ಗುರುತರವಾದ ಜವಾಬ್ದಾರಿಯನ್ನು ನಿಭಾಯಿಸಬೇಕು

10. 2020 ರಲ್ಲಿ ಸಿಂಧನೂರು ತಾಲೂಕಿನ ರಂಗಾಪುರ ಕ್ಯಾಂಪ್ ನ ನಿವಾಸಿ ಗುತ್ತಿಗೆದಾರ ಶ್ರೀ ಪಿ ವೆಂಕಟೇಶ್ವರರಾವ್ ರವರು ನಲವತ್ತು ಲಕ್ಷ ಕೊಟ್ಟು ಜಾಗ ಖರೀದಿಸಿ ಸುಮಾರು ಮೂರು ಕೋಟಿ ರೂಪಾಯಿ ವೆಚ್ಚದಲ್ಲಿ ಹತ್ತು ಶಾಲಾ ಕೋಣೆಗಳು, ಡೈನಿಂಗ್ ಹಾಲ್, ಸ್ಟಾಫ್ ರೂಂ, ಸೈನ್ಸ್ ರೂಂ,ಮಕ್ಕಳಿಗೆ ಕೂಡಲು ಗುಣಮಟ್ಟದ ಡೆಸ್ಕ್ ಗಳು,ಸ್ಟೇಜ್, ಗುಣಮಟ್ಟದ ಕುಡಿಯುವ ನೀರು, ಶೌಚಾಲಯ, ಕೈತೊಳೆಯುವ ನೀರಿನ ತೊಟ್ಟಿ ನಿರ್ಮಿಸಿದ್ದಾರೆ.ಅವರನ್ನು ನಾನು ಈ ಬಗ್ಗೆ ಕೇಳಿದಾಗ ಅವರು ಹೇಳಿದ ಉತ್ತರ ಕೇಳಿ ನನ್ನ ಕಂಗಳು ಹನಿಗೂಡಿದವು." ನಾನು ನಮ್ಮೂರಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಓದುವಾಗ ಜೋಪಡಿ ತರಹದ ಶಾಲೆ ಇತ್ತು. ಅಲ್ಲಿಯೇ ನಾನು ಕಲಿತದ್ದು.ಆಗಿನಿಂದಲೂ ಶಾಲೆಯ ಬಗ್ಗೆ ಯೋಚಿಸುತ್ತಿದ್ದೆ. ದೇವರು ನನಗೆ ಒಳ್ಳೆಯ ಸ್ಥಿತಿ ಕೊಟ್ಟಾಗ ನಾನು ನಮ್ಮೂರಿನ ಮಕ್ಕಳಿಗೆ ಒಂದು ಒಳ್ಳೆಯ ಶಾಲೆ ಕಟ್ಟಿಸಿಕೊಡಬೇಕೆಂಬ ಆಲೋಚನೆ ಬಂದಿತು, ನಾನು ಬೇಕಿದ್ದರೆ ಒಂದು ಸಂಸ್ಥೆ ಸ್ಥಾಪಿಸಿ ಖಾಸಗಿ ಶಾಲೆ ಮಾಡಬಹುದಿತ್ತು. ಆ ಉದ್ದೇಶ ನನಗಿರಲಿಲ್ಲ. ನಾನು ಜೋಪಡಿಯಲ್ಲಿ ಕಲಿತೆ ನಮ್ಮೂರಿನ ಮಕ್ಕಳು ರಾಯಲ್ ಆಗಿ ಕಲಿಯಲಿ,ಆನಂದದಿಂದ ಕಲಿಯಲಿ ಎಂದು ಸರ್ಕಾರಿ ಶಾಲೆಯನ್ನೇ ನಿರ್ಮಿಸಿದೆ, ಎಲ್ಲಾ ದೈವೇಚ್ಛೆ" ಅಂತ ಅವರು ಹೇಳುವಾಗ ಭಾವುಕರಾದರು. ಅವರ ಇಚ್ಛಾಶಕ್ತಿ , ಕಳಕಳಿಗೆ ನಾನು ನಮನಗಳನ್ನರ್ಪಿಸಿದೆ. ಇಲ್ಲಿ ಎರಡು ಪ್ರಸಂಗಗಳು ಒಂದನೆಯದು ಹಾಜಬ್ಬ, ಎರಡನೆಯದು ವೆಂಕಟೇಶ್ವರರಾವ್ ರವರದ್ದು.ಒಬ್ಬ ಬಡವ ಮತ್ತೋರ್ವ ಶ್ರೀಮಂತ. ಇಬ್ಬರ ಸ್ಥಿತಿ ಬೇರೆಬೇರೆ ಇರಬಹುದು ಆದರೆ ಅವರಿಗಿರುವ ಕಳಕಳಿ ಬಹಳ ದೊಡ್ಡಾದು.ಇದನ್ನು ತ್ಯಾಗ ಅಂತಲೂ ಕರೆಯಬಹುದು.ಇಂತಹ ತ್ಯಾಗ ಸಮಾಜದ ದೇವನ್ ಒಲುಮೆಗೆ ಪಾತ್ರವಾಗಬಲ್ಲುದು

11. ಸಮಾಜದ ಋಣ ನಮ್ಮ ಮೇಲಿದೆ ಎನ್ನುವುದನ್ನು ಶಿಕ್ಷಕರ ಆದಿಯಾಗಿ ಎಸ್ ಡಿ ಎಂ ಸಿ ಯವರು ಅರಿಯಬೇಕು.ಪಾಠ ಮಾಡದ ಶಿಕ್ಷಕ ಶಾಲೆಗೂ ಸಮಾಜಕ್ಕೂ ಭಾರ. ಕೆಲ ಶಿಕ್ಷಕರು ವಿನಾ ಕಾರಣ ಅಂಡಲೆದು ಮಕ್ಕಳ್ಗೆ ಕೈಯಾರೆ ಅನ್ಯಾಯ ಮಾಡುವುದನ್ನು ನಾವು ಕಾಣುತ್ತೇವೆ.ಇಂಥವರಿಗೆ ಕರ್ಮ ಕಾಡದೇ ಬಿಡದು.ಮಕ್ಕಳಿಗೆ ಬರುವ ಅನುದಾನದಲ್ಲಿ ಭಾಗ ಕೇಳುವ ಎಸ್.ಡಿ.ಎಂ.ಸಿ ಗಳೂ ಇಲ್ಲದಿಲ್ಲ,ಚಾಕ್ ಪೀಸ್ ಸಹ ಶಾಲೆಗೆ ತರದೇ ಅನುದಾನ ಗುಳುಂ ಮಾಡುವ ಮುಖ್ಯಗುರುಗಳು ಸಹ ಇಲ್ಲದಿಲ್ಲ.ಪುಣ್ಯ ಕಾರ್ಯಕ್ಕೆ ಬಳಸಬೇಕಾದ ಹಣವನ್ನು ತಿಂದು ಹಾಕಿದರೆ ಅದು ಮುಂದೆ ತನ್ನ ಫಲವನ್ನು ಕೊಡದೇ ಬಿಡದು.ಎಸ್.ಡಿ.ಎಂ.ಸಿ ಹಾಗೂ ಶಾಲಾ ಗುರುಗಳು ಸದಾ ಶಾಲೆಯ ಏಳಿಗೆ ಮಕ್ಕಳ ಏಳಿಗೆಯ ಬಗ್ಗೆ ಶ್ರಮಿಸಬೇಕು. ಅನುದಾನವನ್ನು ಜೇಬಿಗಿಳಿಸಬಾರದು

12. ಎಸ್.ಡಿ.ಎಂ.ಸಿ ಶಾಲೆಯ ಬೆನ್ನುಲುಬಾಗಿ ನಿಲ್ಲಬೇಕು. ಸಾಯಂಕಾಲವಾದ ನಂತರ ಶಾಲೆಗಳು ಬಯಲು ಬಾರ್ ಗಳಾಗುತ್ತವೆ. ಕುಡುಕರು ಇಲ್ಲಿ ಕುಡಿದು ನೀರಿನ ಬಾಟಲ್, ಮದ್ಯದ ಬಾಟಲ್ ಇತ್ಯಾದಿಗಳನ್ನು ಎಸೆದು ಹೋಗುತ್ತಾರೆ. ಬೆಳಿಗ್ಗೆ ಶಾಲೆಗೆ ಬರುವ ದೈವ ಸಮಾನರಾದ ಮುಗ್ಧ ಮನದ ಮಕ್ಕಳು ಅವುಗಳನ್ನೆಲ್ಲ ಎತ್ತಿ ಬಿಸಾಡಿ ಶಾಲಾ ಅಂಗಳ ಶುಚಿ ಮಾಡುವ ಕಾರ್ಯದಲ್ಲಿ ತೊಡಗುತ್ತವೆ, ಕನಿಷ್ಠ ಮಟ್ಟದ ಪರಿಜ್ಞಾನ ಕಳೆದುಕೊಂಡ ಈ ರೀತಿಯ ಮನೋಭಾವದವರನ್ನು ಹತೋಟಿಗೆ ತರುವುದು ಎಸ್.ಡಿ.ಎಂಸಿ ಯವರು ಮಾಡಬೇಕು. ಬಳ್ಳಾರಿಯ ರೇಡಿಯೋ ಪಾರ್ಕ್ ಸರ್ಕಾರಿ ಪ್ರೌಢ ಶಾಲೆಯ ಮುಖ್ಯಗುರು ಶ್ರೀ ಕೃಷ್ಣಮೋಹನ್ ರವರು ಒಮ್ಮೆ ನನ್ನನ್ನು ಕರೆದು ಮುಖ್ಯಗುರುಗಳ ಕಾರ್ಯಾಲಯದ ಬಾಗಿಲ ಮುಂದೆ ಪಾಪಿಯೋರ್ವ ಶೌಚ ಮಾಡಿ ಹೋದುದನ್ನು ತೋರಿಸಿ ಬಹು ನೊಂದುಕೊಂಡು ದಿನವೂ ಹೀಗೆ ಮಾಡುತ್ತಾರೆ, ಇದಕ್ಕೆ ಪರಿಹಾರ ಏನು ಸಾರ್ ಅಂದಾಗ ನನ್ನ ಬಳಿ ಮಾತುಗಳಿಲ್ಲದಾದವು.ಆ ಹೊಲಸನ್ನು ಆ ಶಾಲೆಯ ಜವಾನರು ಹತ್ತಾರು ಬಾರಿ ತೊಳೆದ ವಿಷಯ ತಿಳಿದು ನನಗೆ ಬಹಳ ನೋವಾಯಿತು. ಯಾಕೆ ಇಂತಹ ಮನೋಭಾವ? ಇದಕ್ಕೆ ಪರಿಹಾರ ಇಲ್ಲವೇ? ಖಂಡಿತವಾಗಿಯೂ ಇದೆ ಅದೇ ಎಸ್ ಡಿ ಎಂ ಸಿ. ಮತ್ತೊಂದು ಪ್ರಕರಣವನ್ನು ನಾನು ಹೇಳಲೇಬೇಕಿದೆ, ಕೂಡ್ಲಿಗಿ ತಾಲೂಕಿನ ಈಚಲಬೊಮ್ಮನಹಳ್ಳಿ ಶಾಲಾ ಶಿಕ್ಷಕರೆಲ್ಲರೂ ಬಿಇಓ ಕಾರ್ಯಾಲಯಕ್ಕೆ ಆಗಮಿಸಿ, ಊರಿನ ಕೆಲವರು ಶಾಲಾ ಕೋಣೆಗಳ ಹಿಂದೆ ಶೌಚ ಮಾಡಿ ಹೋಗುತ್ತಾರೆ.ಅದರ ದುರ್ವಾಸನೆಯನ್ನು ನಾವು ಮಕ್ಕಳು ಕುಡಿಯಬೇಕು. ಎಷ್ಟು ಹೇಳಿದರೂ ಕೇಳುತ್ತಿಲ್ಲ ಅಂದಾಗ ನಾನು ಖುದ್ದಾಗಿ ಊರಿಗೆ ಹೋಗಿ ಕೆಲ ಗ್ರಾಮಸ್ಥರನ್ನು ಕೇಳಿದಾಗ" ನಮಗೆ ಶೌಚಾಲಯ ಇಲ್ಲ, ಏನು ಮಾಡೋಣ" ಅಂತ ಎದ್ದು ಹೋದರು. ಅವರ ಈ ಮನಸ್ಥಿತಿಗೆ ಏನನ್ನೋಣ.? ಕೆಲ ದಿನಗಳ ನಂತರ ಅನುದಾನಕ್ಕೆ ಬರೆದು ಅನುದಾನ ಬಂದ ನಂತರ ಆ ಶಾಲೆಗೆ ಕಾಂಪೌಂಡ್ ನಿರ್ಮಿಸಲಾಯಿತು.ಇಂತಹ ಕ್ಲಿಷ್ಟ ಸನ್ನಿವೇಶಗಳಲ್ಲಿ ಎಸ್‌ಡಿಎಂಸಿ ಮಕ್ಕಳ ಪರವಾಗಿ ನಿಲ್ಲುವುದು ಅವರ ಆದ್ಯ ಕರ್ತವ್ಯವಾಗಬೇಕು

13. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಕರೆತರಲು ಶಿಕ್ಷಕರು ಊರಲ್ಲಿ ಮನೆಮನೆಗೂ ಅಡ್ಡಾದುತ್ತಾರೆ.ಇವರಿಗೆ ಪೂರಕವಾಗಿ ಎಸ್‌ಡಿಎಂಸಿ ಕೈಜೋಡಿಸಿ ಮಕ್ಕಳನ್ನು ಶಾಲೆಗೆ ಕರೆತಂದು ನಿರಂತರವಾಗಿ ಆ ಮಕ್ಕಳು ಶಾಲೆಗೆ ಬರುವಂತೆ ನೋಡಿಕೊಳ್ಳುವ ಕೆಲಸವನ್ನು ಎಸ್.ಡಿ ಎಂ ಸಿ ಮಾಡಬೇಕು

14, ಶಿಕ್ಷಕ ಹುದ್ದೆಗಳು ಖಾಲಿ ಇದ್ದಾಗ ಕೆಲ ಎಸ್.ಡಿ.ಎಂ.ಸಿ ಯವರು ತಮ್ಮ ಸ್ವಂತ ಹಣದಿಂದ ನಿರುದ್ಯೋಗಿ ಪಧವೀಧರರನ್ನು ಶಿಕ್ಷಕರನ್ನಾಗಿ ತಾತ್ಕಾಲಿಕವಾಗಿ ನೇಮಿಸಿದ ಹಲವಾರು ಪ್ರಸಂಗಗಳಿವೆ.ಈ ರೀತಿಯ ಕಾರ್ಯಗಳು ಸ್ವಾಗತಾರ್ಹ

15. ಡಿಜಿಟಲ್ ಯುಗ ಮುನ್ನುಗ್ಗುತ್ತಿದೆ.ರೇಡಿಯೋ ಪಾಠಗಳ ಕಾಲ ಹಿಂದೆ ಸರಿದಿದೆ. ಪ್ರತಿಯೊಂದು ಶಾಲೆಗೂ ಒಂದು ಎಲ್‌ಇಡಿಟಿವಿ ಹಾಗೂ ಕಂಪ್ಯೂಟರ್ ಗಳ ಅಗತ್ಯತೆ ಇದೆ. ಡಿಜಿಟಲ್ ಮಾಧ್ಯಮದ ಮೂಲಕ ಕಲಿಕೆ ಇನ್ನಷ್ಟು ವೇಗವಾಗಿ ಆಗುತ್ತದೆ. ಗ್ರಾಮಸ್ಥರ ಸಹಾಯದಿಂದ ತಮ್ಮ ದೇಣಿಗೆಯನ್ನು ಸಹ ಸಮರ್ಪಿಸುವುದರ ಜೊತೆಗೆ ಎಸ್‌ಡಿಎಂಸಿಗಳು ಈ ನಿಟ್ಟಿನಲ್ಲಿ ಶಾಲೆಯನ್ನು ಶ್ರೀಮಂತ ಗೊಳಿಸಬಹುದಾಗಿದೆ.

16. ಹಳೆಯ ವಿದ್ಯಾರ್ಥಿಗಳ ಸಹಾಯದಿಂದ ಶಾಲೆಗೆ ಬೇಕಾದ ಸಾಮಗ್ರಿಗಳನ್ನು ಪಡೆಯಲು ಸಾಧ್ಯವಿದೆ. ಬಹಳಷ್ಟು ಕಡೆ ನಗರಗಳಲ್ಲಿ ಕೆಲಸ ಮಾಡುತ್ತಿರುವ ಹಳೆಯ ವಿದ್ಯಾರ್ಥಿಗಳು ಶಾಲೆಯನ್ನು ಸಂಪದ್ಭರಿತಗೊಳಿಸಿದ್ದಾರೆ. ಮಕ್ಕಳಿಗೆ ಷೂ, ನೋಟ್ ಬುಕ್, ಪ್ಲೇಟ್, ಕ್ರೀಡಾ ಸಾಮಗ್ರಿ, ಚಪ್ಪಲಿಗಳನ್ನು ಹಾಗೂ ಇನ್ನಿತರ ಶಾಲಾ ಅವಶ್ಯಕತೆಗಳನ್ನು ಪೂರೈಸಿದ್ದಾರೆ. ಇಂತಹ ದೇಣಿಗೆಗಳನ್ನು ಶಾಲೆಗೆ ನೀಡಿದ ದಾನಿಗಳನ್ನು ಕರೆದು ಸನ್ಮಾನಿಸುವುದು ಎಸ್.ಡಿ.ಎಂ.ಸಿಯ ಕರ್ತವ್ಯವಾಗಿದೆ

17. ಮುಂದಿನ ವಿದ್ಯಾಭ್ಯಾಸಕ್ಕೆ ಕಳಿಸಲು ಆರ್ಥಿಕ ಸ್ಥಿತಿ ಇಲ್ಲದ ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸದಂತೆ ಪಾಲಕ ಪೋಷಕರ ಮನ ಒಲಿಸಿ ಅಂತಹ ಮಕ್ಕಳಿಗೆ ಮನೋಬಲ ನೀಡುವುದರ ಜೊತೆಗೆ ಆರ್ಥಿಕ ಸಹಾಯ ಮಾಡುವುದು ಎಸ್.ಡಿ. ಎಂ.ಸಿಯ ಕರ್ತವ್ಯವಾಗಬೇಕು.

ಎಸ್.ಡಿ.ಎಂ.ಸಿ ಸದಸ್ಯರಿಗೆ ಸಹಾಯ ಮಾಡುವ ಅವಕಾಶವನ್ನು ಸರ್ಕಾರ ಕಾನೂನಿನ ಮೂಲಕ ಕಲ್ಪಿಸಿಕೊಟ್ಟಿದೆ. ಒಂದು ಕಾನೂನು ರೂಪುಗೊಳ್ಳಬೇಕಾದರೆ ಅದರ ಸಧಕ ಬಾಧಕಗಳನ್ನು ಚರ್ಚಿಸಿದ ನಂತರವೇ ಅನುಷ್ಠಾನಕ್ಕೆ ತರಲಾಗುತ್ತದೆ. ಈ ಕಾನೂನು ಶಾಲೆಗಳಿಗೆ ವರವಾಗಬೇಕೇ ವಿನಃ ಶಾಪವಾಗವಾರದು. ಶಾಲೆಯ ಬಗ್ಗೆ, ಶಾಲೆಯ ಮಕ್ಕಳ ಬಗ್ಗೆ, ಗ್ರಾಮದ ಏಳಿಗೆಯ ಬಗ್ಗೆ ಚಿಂತಿಸುವ ಯಾವೊಬ್ಬ ಸದಸ್ಯರೂ ಮೇರೆಸೀಮೆಗಳನ್ನು ದಾಟಿ ವರ್ತಿಸುವುದಿಲ್ಲ.ತ್ಯಾಗಸೇವೆಗಳೇ ಅವರ ಬದುಕಿನ ಧ್ಯೇಯವಾಗಿರುತ್ತದೆ. ಎಲ್ಲರಲ್ಲಿಯೂ ಅಂತಹ ಮನೋಭಾವನೆ ಬರುವುದು ಅಗತ್ಯವಾಗಿದೆ.

# ಪಿಡಿಓ ಹುದ್ದೆಗೆ ಶೇ.8ರಷ್ಟು ಮುಂಬಡ್ತಿ ಕೊಡಿ

## ಶಾಸಕ ಜೆ.ಎನ್.ಗಣೇಶ್‌ಗೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಮನವಿ

■ ಹಂಪಿ ಟೈಮ್ಸ್ ಕಂಪ್ಲಿ

ಕಲ್ಯಾಣ ಕರ್ನಾಟಕದ ಪ್ರದೇಶಗೊಳಪಟ್ಟ ಗ್ರಾಪಂ. ಗ್ರೇಡ್–1 ಕಾರ್ಯದರ್ಶಿಗಳಿಗೆ 24ಜಿಲ್ಲೆಗಳಲ್ಲಿ ಪಿಡಿಓ ಹುದ್ದೆಗೆ ಶೇ.8ರಷ್ಟು ಮುಂಬಡ್ತಿ ನೀಡುವಂತೆ ಆಗ್ರಹಿಸಿ, ಶಾಸಕ ಜೆ.ಎನ್.ಗಣೇಶ್‌ಗೆ ರಾಜ್ಯ ಗ್ರಾಪಂ ಕಾರ್ಯದರ್ಶಿ ಗ್ರೇಡ್–1 ಮತ್ತು 2 ಹಾಗೂ ದ್ವಿತೀಯ ದರ್ಜೆ ಲೆಕ್ಕಸಹಾಯಕರ ಕ್ಷೇಮಾಭಿವೃದ್ಧಿ ಸಂಘದ ತಾಲೂಕು ಪದಾಧಿಕಾರಿಗಳು ಬುಧವಾರ ಮನವಿ ಸಲ್ಲಿಸಿದರು.

ಸಂಘದ ತಾಲೂಕು ಅಧ್ಯಕ್ಷ ವಿ.ಕೆ.ನಾಗರಾಜರಾವ್ ಮಾತನಾಡಿ, ಪಿಡಿಓ ಹುದ್ದೆಯನ್ನು ಮೇಲ್ದರ್ಜೆಗೇರಿಸಿ 2023ರ ಮಾರ್ಚ್‌ನಿಂದ



ರಾಜ್ಯಮಟ್ಟದ ಹುದ್ದೆಯಾಗಿ ಆದೇಶ ಮಾಡಿದೆ. ಗ್ರಾಪಂ.ಗ್ರೇಡ್–1 ಕಾರ್ಯದರ್ಶಿ ಹುದ್ದೆಯಿಂದ ಪಿಡಿಓ ಹುದ್ದೆಗೆ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ರಾಜ್ಯಮಟ್ಟದಲ್ಲಿ ಮುಂಬಡ್ತಿ ನೀಡಲಾಗುತ್ತಿದೆ. ಕಕ ಭಾಗದವರಿಗೆ 24ಜಿಲ್ಲೆಗಳಲ್ಲಿ ಶೇ.8ರಷ್ಟು ಮುಂಬಡ್ತಿ ನೀಡಿಲ್ಲ. ಕಲ್ಯಾಣ ಕರ್ನಾಟಕ ಹೊರತುಪಡಿಸಿ ಉಳಿದ 24ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದ್ದ ಪಿಡಿಓಗಳ ಸಂಖ್ಯೆಗೆ ಅನುಗುಣವಾಗಿ ಕಲ್ಯಾಣ ಕರ್ನಾಟಕ ಭಾಗದವರಿಗೆ ಶೇ.8ರಷ್ಟು ಮುಂಬಡ್ತಿ ನೀಡುವಂತೆ ತಾವು ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಸಚಿವರಿಗೆ ಶಿಫಾರಸ್ಸು ಪತ್ರ ನೀಡುವಂತೆ ಒತ್ತಾಯಿಸಿದರು. ಪದಾಧಿಕಾರಿಗಳಾದ ಎಚ್. ಹುಲುಗಪ್ಪ, ದೊಡ್ಡಬಸಪ್ಪ, ಸಣ್ಣಪುರ ಶಿವಪ್ಪ, ಕುರಿ ಹೊನ್ನೂರಸ್ವಾಮಿ, ಮನೋಜ್ ಇದ್ದರು.

# ಮಾನವೀಯ ಮೌಲ್ಯಗಳು ಜೀವನದ ಆಧಾರಸ್ತಂಭಗಳು

## ಎನ್‌ಎಸ್‌ಎಸ್ ಶಿಬಿರದಲ್ಲಿ ಶಿಕ್ಷಕ ಶಿವರಾಜ್ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದರು



■ ಹಂಪಿ ಟೈಮ್ಸ್ ಹೊಸಪೇಟೆ

ಮಾನವೀಯ ಮೌಲ್ಯಗಳು ಮಾನವ ಜೀವನದ ಆಧಾರಸ್ತಂಭಗಳಾಗಿವೆ. ಪ್ರತಿ ಮಾನವನಲ್ಲೂ ಈ ಮೌಲ್ಯಗಳು ಸ್ವಾಭಾವಿಕವಾಗಿಯೇ ಅಸ್ತಿತ್ವದಲ್ಲಿವೆ, ಆದರೆ ಇವುಗಳನ್ನು ಚಿಂತನೆ, ಅಭ್ಯಾಸ, ಮತ್ತು ಜಾಗೃತಿಯ ಮೂಲಕ ಬೆಳೆಸಬೇಕು ಎಂದು ಶಿಕ್ಷಕ ಶಿವರಾಜ್ ಹೇಳಿದರು.


ತಾಲೂಕಿನ ಮಲಪನಗುಡಿಯಲ್ಲಿ ವಿಜಯನಗರ ಪ.ಪೂ.ಮಹಾ ವಿದ್ಯಾಲಯದಿಂದ ನಡೆಯುತ್ತಿರುವ ಎನ್‌ಎಸ್‌ಎಸ್ ಶಿಬಿರದಲ್ಲಿ ಬುಧವಾರ ಉಪನ್ಯಾಸ ನೀಡಿ ಮಾತನಾಡಿದರು. ಮಾನವೀಯ ಮೌಲ್ಯಗಳು ಒಬ್ಬ ವ್ಯಕ್ತಿಯ ಔದಾರ್ಯ, ಸಹಾನುಭೂತಿ, ಸತ್ಯನಿಷ್ಠೆ, ಅಹಿಂಸೆ, ಗೌರವ ಮತ್ತು ಸೇವಾಭಾವನೆಯಂತಹ ಗುಣ ಗಳನ್ನು ಒಳಗೊಂಡಿವೆ. ಪ್ರತಿಯೊಬ್ಬ ವಿದ್ಯಾರ್ಥಿ ಅಳವಡಸಿ ಕೊಳ್ಳುವ ಮೂಲಕ ಸಮಾಜಕ್ಕೆ ಮಾದರಿ ವ್ಯಕ್ತಿಯಾಗಬೇಕು ಎಂದರು. ಪ್ರಾಚರ್ಯ ಕೆ.ಮಲ್ಲಿಕಾರ್ಜುನಗೌಡ, ಉಪನ್ಯಾಸ ಟಿ.ಎಂ.ಪ್ರಭುಸ್ವಾಮಿ, ಶಿಬಿರದ ಯೋಜನಾಧಿಕಾರಿ ಕೆ.ಶರಣಬಸವ ಹಸಮಕಲ್ ಉಪಸ್ಥಿತರಿದ್ದರು. ಶಿಬಿರಾರ್ಥಿಗಳು ಇದ್ದರು

### ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ–4 | 60 ಕ್ಕೂ ಅಧಿಕ ಶಾಲೆಗಳು, ಸಾವಿರಾರು ವಿದ್ಯಾರ್ಥಿಗಳು ಭಾಗಿ


# ಈ ಬಾರಿ ಫಲಿತಾಂಶ ನಮ್ಮದೆ

# ಕಲಾತ್ಮಕ ಪ್ರಜ್ಞೆ ಹೆಚ್ಚಿದ ವಿಜ್ಞಾನ ಚಿತ್ರ ಸ್ಪರ್ಧೆ


## ಹೊಸಪೇಟೆಯ ಅನಂತಶಯನಗುಡಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ ಕೆ.ಮಣಿಕಂಠ ಪ್ರಥಮ ಹೊಸಪೇಟೆ ತಾಲೂಕಿನ ಕಮಲಾಪುರ ಸ.ಪ.ಪೂ.ಕಾಲೇಜ್ (ಪ್ರೌಢಶಾಲೆ) ವಿದ್ಯಾರ್ಥಿ ಷೇಷಾವಲಿ ದ್ವಿತೀಯ ಕೂಡ್ಲಿಗಿ ತಾಲೂಕಿನ ಕಾನಮಡುಗು ಶರಣಬಸವೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿನಿ ಆಫ್ರೀನ್ ತೃತೀಯ



ಪ್ರಥಮ : ಕೆ.ಮಣಿಕಂಠ
ಸರ್ಕಾರಿ ಪ್ರೌಢಶಾಲೆ ಅನಂತಶಯನ ಗುಡಿ, ಮಾ.ಶಿಕ್ಷಕಿ– ಜೆ.ಗಂಗಮ್ಮ



ದ್ವಿತೀಯ: ಎನ್.ಷೇಷಾವಲಿ ಸ.ಪ.ಪೂ ಕಾಲೇಜು, ಕಮಲಾಪುರ
ಶಿಕ್ಷಕರು– ಆಸ್ಮಾ ತರನ್ನುಂ/ನೇಮ್ಯನಾಯ್ಕ




ತೃತೀಯ:. ಆಫ್ರೀನ್ , ಶರಣಬಸವೇಶ್ವರ ಪ್ರೌಢಶಾಲೆ,
ಕಾನಾಮಡುಗು ಶಿಕ್ಷಕರು –

■ ಹಂಪಿ ಟೈಮ್ಸ್ ಹೊಸಪೇಟೆ

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಲ್ಲಿ ಕಲಿಕಾಂಶಗಳನ್ನು ಪರಿಣಾಮಕಾರಿ ಅಭ್ಯಾಸ ಮಾಡಲು ಅನುಕೂಲವಾಗುವಂತೆ ಹಂಪಿ ಟೈಮ್ಸ್ ದಿನಪತ್ರಿಕೆ ಬಳಗ ವರ್ಷದ ಆರಂಭದಿಂದಲೂ ಶಿಕ್ಷಕರ ತಂಡದ ಸಹಕಾರದೊಂದಿಗೆ ವಿನೂತನ ಪ್ರಯೋಗಗಳ ಮೂಲಕ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು ಉತ್ತೇಜಿಸುವುದು ಮತ್ತು ಕಲಾತ್ಮಕ ಪ್ರತಿಭೆಗಳಿಗೆ ಪ್ರೋತ್ಸಾಹ ನಿಡುತ್ತಾ ಬರಲಾಗಿದೆ. ಈ ಭಾರಿ ಫಲಿತಾಂಶ ನಮ್ಮದೆ ಎಂಬ ಶೀರ್ಷಿಕೆಯಡಿ ಶೈಕ್ಷಣಿಕ ವರ್ಷದ ಆರಂಭದಿಂದಲೂ ಪ್ರತಿ ನಿತ್ಯ ದಿನಕ್ಕೊಂದು ವಿಷಯದಂತೆ ಕನ್ನಡ, ಗಣಿತ, ಇಂಗ್ಲಿಷ್, ವಿಜ್ಞಾನ, ಹಿಂದಿ ಹಾಗೂ ಸಮಾಜ ವಿಜ್ಞಾನದ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಮತ್ತು ಕಲಿಕೆಗೆ ಸುಲಭವಾಗಲು ಶಿಕ್ಷಕರು ಪ್ರಶ್ನೋತ್ತರ ಮಾಲೆಯನ್ನು ನೀಡಿದ್ದಾರೆ. ಈ ಪ್ರಕ್ರಿಯೆ ಮಕ್ಕಳಲ್ಲಿ ಓದುವ ಹವ್ಯಾಸ



ಕೆ.ಮಣಿಕಂಠ



ಎನ್.ಷೇಷಾವಲಿ



ಆಫ್ರೀನ್

ಹೆಚ್ಚಿಸುವುದರೊಂದಿಗೆ ಕಲಿಕಾಸಕ್ತಿಯನ್ನು ಇಮ್ಮಡಿಗೊಳಿಸಿರುವುದನ್ನು ಸ್ವತಃ ವಿದ್ಯಾರ್ಥಿಗಳು, ಶಿಕ್ಷಕರು, ಪಾಲಕರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವಿಜಯನಗರ ಜಿಲ್ಲೆ ಸೇರಿದಂತೆ ವಿವಿಧ ಜಿಲ್ಲೆಗಳ ಮಕ್ಕಳು ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವುದು ಫಲಿತಾಂಶ ಪ್ರಗತಿಯ ಸಂಕೇತವಾಗಿದೆ.

ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ–4ರಲ್ಲಿ 60ಕ್ಕು ಅಧಿಕ ಶಾಲೆಗಳು ಭಾಗವಹಿಸಿವೆ. ವಿಜಯನಗರ, ಬಳ್ಳಾರಿ, ಕೊಪ್ಪಲ, ಗದಗ, ಶಿವಮೊಗ್ಗ ಜಿಲ್ಲೆಯ ವಿದ್ಯಾರ್ಥಿಗಳು ಚಿತ್ರಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ವಾರ್ಷಿಕ ಪರೀಕ್ಷೆ ಎದುರಿಸಲು ಸನ್ನದ್ಧರಾಗತ್ತಿದ್ದಾರೆ. ಡಿ.20 ರಂದು ನಡೆದ ಸಾರರಿಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ಸತು ವಿನ ಚೂರುಗಳ ವರ್ತನೆ ಮತ್ತು ಉರಿಸುವಿಕೆಯ ಮೂಲಕ ಹೈಡ್ರೋಜನ್ ಅನಿಲದ ಪರೀಕ್ಷೆ ಮಾಡುವ ಉಪಕರಣದ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ? ಸ್ಪರ್ಧೆಯಲ್ಲಿ ಸುಮಾರು 3 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ. ಹೊಸಪೇಟೆಯ ಅನಂತಶಯನಗುಡಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಕೆ.ಮಣಿಕಂಠ (ಪ್ರಥಮ), ಹೊಸಪೇಟೆ ತಾಲೂಕಿನ ಕಮಲಾಪುರದ ಸ.ಪ.ಪೂ ಕಾಲೇಜ್ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿ ಎನ್. ಷೇಷಾವಲಿ (ದ್ವಿತೀಯ) ಹಾಗೂ ಕೂಡ್ಲಿಗಿ ತಾಲೂಕಿನ ಕಾನಮಡುಗು ಶರಣಬಸವೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿನಿ ಆಫ್ರೀನ್ (ತೃತೀಯ) ಚಿತ್ರಗಳು ಅತ್ಯುತ್ತಮವಾಗಿವೆ ಎಂದು ಆಯ್ಕೆ ಸಮಿತಿ ತಂಡದ ಮುಖ್ಯಸ್ಥರಾದ ಶಿವತನಯ ಎಸ್.ಸಿ. ಅವರು ತಿಳಿಸಿದ್ದಾರೆ.. ಸ್ಪರ್ಧೆಯಲ್ಲಿ ಭಾಗವಹಿಸಿ ಆಯಾ ಶಾಲೆಯಲ್ಲಿ ಅತ್ಯುತ್ತಮ ಚಿತ್ತ ಬಿಡಿಸಿದ ವಿದ್ಯಾರ್ಥಿಗಳ ವಿವರ ಈ ಕೆಳಗಿನಂತಿದೆ.

**॥ ಈ ವಾರದ (27–12–2024) ಚಿತ್ರ ಬಿಡಿಸುವ ಸ್ಪರ್ಧೆ–5 : ತಾಮ್ರದ ವಿದ್ಯುತ್ ವಿಭಜನೀಯ ಶುದ್ಧೀಕರಣ ಮಾಡುವ ಉಪಕರಣದ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ ॥**

## ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರಸ್ಪರ್ಧೆ–4ರಲ್ಲಿ ಶಾಲಾಹಂತದಲ್ಲಿ ದಿ ಬೆಸ್ಟ್ ಚಿತ್ರ ಬಿಡಿಸಿ ಆಯ್ಕೆಯಾದ ವಿದ್ಯಾರ್ಥಿಗಳು

### ಹೊಸಪೇಟೆ ತಾಲೂಕು

**1. ಕೆ.ಮಣಿಕಂಠ**
ಸರ್ಕಾರಿ ಪ್ರೌಢಶಾಲೆ ಅನಂತಶಯನ ಗುಡಿ
ಶಿಕ್ಷಕಿ – ಜೆ.ಗಂಗಮ್ಮ

**2. ಎನ್.ಷೇಷಾವಲಿ**
ಸ.ಪ.ಪೂ ಕಾಲೇಜು, ಕಮಲಾಪುರ
ಶಿಕ್ಷಕರು– ಆಸ್ಮಾ ತರನ್ನುಂ/ನೇಮ್ಯನಾಯ್ಕ

**3. ಎನ್.ಸಂಜನಾ**
ಪ್ರಿಯದರ್ಶಿನಿ ಬಾಲಕಿಯರ ಪ್ರೌಢಶಾಲೆ
ಮರಿಯಮ್ಮನಹಳ್ಳಿ
ಶಿಕ್ಷಕರು–ಜಾಕಿರ್ ಹುಸೇನ್

**4 .ಶ್ರೀನಿಧಿ**
ಜೆಸ್ಸೀಸ್ ಪ್ರೌಢಶಾಲೆ, ಎನ್.ಸಿ ಕಾಲೋನಿ
**ಹೊಸಪೇಟೆ**
ಶಿಕ್ಷಕರು–ಶೋಭಾ ಕೆ ಎಸ್

**5. ಪ್ರಶಾಂತ ಕುಮಾರ**
ಸರ್ಕಾರಿ ಪ್ರೌಢಶಾಲೆ, **ಗುಂಡ**
ಶಿಕ್ಷಕರು–ನಾರಾಯಣ ಕೆ

**6. ಹೆಚ್. ಅಂಕಿತ**
ಗ್ರಾಮಾಂತರ ಅನುದಾನಿತ ಪ್ರೌಢಶಾಲೆ,
**ಪಾಪಿನಾಯಕನಹಳ್ಳಿ**
ಶಿಕ್ಷಕರು–ನಜೀರ್ ಪಾಟೀಲ್

**7. ಎನ್.ಜಿ.ಎಮ್ ಪೂಜ**
ಭಾರತರತ್ನ ರಾಜೀವ್ ಗಾಂಧಿ ಪ್ರೌಢಶಾಲೆ,
**ಜಿ ನಾಗಲಾಪುರ**
ಶಿಕ್ಷಕರು–ಚನ್ನಬಸಪ್ಪ ಕೆ.ಡಿ

**8. ವಿನೋದ್ ಕುಮಾರ್**
ಸ್ಕಯೋರ್ ವ್ಯಾಸಪುರಿ ಆಂಗ್ಲ ಮಾಧ್ಯಮ
ಪ್ರೌಢಶಾಲೆ, **ವ್ಯಾಸನ ಕೇರಿ**
ಶಿಕ್ಷಕರು–ನಂದಕುಮಾರ/ವಾಣಿ

**9. ಜೀವಿತಾ**
ಸರ್ಕಾರಿ ಪ್ರೌಢಶಾಲೆ, **ಬುಕ್ಕಸಾಗರ**
ಶಿಕ್ಷಕರು– ಮಹಮ್ಮದ್ ಮನ್ಸೂರ್ ಅಲಿ

**10. ಯು. ಪಲ್ಲವಿ**
ಬಾಲಕಿಯರ ಪ್ರೌಢಶಾಲೆ (ಮಾ.ಪು)
**ಹೊಸಪೇಟೆ**
ಶಿಕ್ಷಕರು–ರುಕ್ಸಾನ

**11. ಶಾಂಭವಿ ಎಂ**
ಸ.ಸಂ.ಪ.ಪೂ.ಕಾಲೇಜು
ಚಿತ್ತವಾಡಗಿ **ಹೊಸಪೇಟೆ**
ಶಿಕ್ಷಕರು– ಎ ಎಂ ವರಲಕ್ಷ್ಮಿ

**12. ಶ್ರೀನಿಧಿ**
ಸರ್ಕಾರಿ ಪ್ರೌಢಶಾಲೆ, ಎನ್.ಸಿ ಕಾಲೋನಿ
**ಹೊಸಪೇಟೆ**
ಶಿಕ್ಷಕರು–ಶಾನು ಟಿ

**13. ನೂಲಿ ತ್ರಿವೇಣಿ**
ಬಾಲಕಿಯರ ಸಂ.ಪ. ಪೂ. ಕಾಲೇಜು
ಅಮರಾವತಿ_ಹೊಸಪೇಟೆ
ಶಿಕ್ಷಕರು–ಶಿವಮ್ಮ

**14. ಬಿ.ಅನುಷ**
ಸರ್ಕಾರಿ ಪ್ರೌಢಶಾಲೆ, ಡಣಾಪುರ
ಶಿಕ್ಷಕರು– ಸಂಧ್ಯಾ ಸೌಜನ್ಯ

**15. ಸಂತೋಷ್**
ರಾಣಿಚನ್ನಮ್ಮ ಪ್ರೌಢಶಾಲೆ, ಹೊಸಪೇಟೆ
ಶಿಕ್ಷಕರು– ಸಿಂಧುಜಾ

**16. ಎನ್.ಹುಲಿಗೆಮ್ಮ**
ಕೆ.ಜಿ.ಬಿ.ವಿ ಕಮಲಾಪುರ
ಶಿಕ್ಷಕರು– ಗಾಯಿತ್ರಿ ಟಿ

**17. ಎಂ.ಜೆ ಆಲಿಯಾ**
ಸರ್ದಾರ್ ಪಾಟೀಲ್ ಸ.ಪ್ರೌ ಶಾಲೆ
ಹೊಸಪೇಟೆ
ಶಿಕ್ಷಕರು–

**18. ಪವಿತ್ರ**
ಸ.ಬಾ.ಪ್ರೌ ಶಾಲೆ, ಕಮಲಾಪುರ
ಶಿಕ್ಷಕರು– ಅನಿಲ್ ಕುಮಾರ್ ಕೆ

**19. ಎನ್.ಯುವರಾಜ**
ವಿ.ಎಸ್.ಬಿ.ಸಿ ಪ್ರೌ ಶಾಲೆ, ಹೊಸಪೇಟೆ
ಶಿಕ್ಷಕರು– ಹೆಚ್. ಶಕುಂತಲ/ಜಯಪ್ರಭು

**20. ಪ್ರಶಾಂತಕುಮಾರ**
ಶ್ರೀ ತೆಲುಗುಬಾಳು ಸಿದ್ದ ಪ್ರೌಢಶಾಲೆ,
ತೆಲುಗುಬಾಳು–ಚಿಲಕನಹಟ್ಟಿ
ಶಿಕ್ಷಕರು– ರಮೇಶ ವೈ.ಎನ್

**21. ಎಂ.ಜಿ ರಾಮಾಂಜಿನಿ**
ಸರ್ಕಾರಿ ಪ್ರೌಢಶಾಲೆ, ಹಂಪಿನಕಟ್ಟಿ
ಶಿಕ್ಷಕರು– ವೈ. ಪ್ರಶಾಂತ್

**22. ಗಂಗೋತ್ರಿ**
ಸರ್ಕಾರಿ ಪ್ರೌಢಶಾಲೆ, ಮಲಪನಗುಡಿ
ಶಿಕ್ಷಕರು–ಅನಿತಾ ಎ.ವಿ

**23. ಆರ್. ಲಕ್ಷ್ಮಿ**
ಸರ್ಕಾರಿ ಪ್ರೌಢಶಾಲೆ, ಕಾರಿಗನೂರು
ಶಿಕ್ಷಕರು–

**24. ಅಂಬಿಕಾ**
ಶ್ರೀಸಾಯಿ ಕನ್ನಡ ಮಾಧ್ಯಮ ಪ್ರೌಢಶಾಲೆ,
ಮರಿಯಮ್ಮನಹಳ್ಳಿ
ಶಿಕ್ಷಕರು– ರಂಜಿತ ಯು

**25. ಅಪ್ಸಾನಾ ಬಾನು**
ಶ್ರೀ ಸೇಂಟ್ ಆಂಗ್ಲಮಾಧ್ಯಮ ಪ್ರೌಢಶಾಲೆ,
ಮರಿಯಮ್ಮನಹಳ್ಳಿ
ಶಿಕ್ಷಕರು– ಸರಸ್ವತಿ

**26. ಆಪ್ರೀನ್ ಯು**
ಸ.ಪ.ಪೂ.ಕಾಲೇಜ್, ಮರಿಯಮ್ಮನಹಳ್ಳಿ
ಶಿಕ್ಷಕರು– ಟಿ ಅನಿತಾ

**27. ನಿಹಾರಿಕಾ**
ಮಹಿಳಾ ಸಮಾಜ ಆಂಗ್ಲಮಾಧ್ಯಮ
ಪ್ರೌಢಶಾಲೆ, ಹೊಸಪೇಟೆ
ಶಿಕ್ಷಕರು– ಕವಿತಾ. ಎ.ಎಂ

**28. ವೇದಾವತಿ**
ಸರ್ಕಾರಿ ಪ್ರೌಢಶಾಲೆ, ಕಾಕುಬಾಳು
ಶಿಕ್ಷಕರು– ಶಶಿಧರ ಪಿ.ಎಂ

### ಹಗರಿಬೊಮ್ಮನಹಳ್ಳಿ ತಾಲೂಕು

**1. ಪಿ. ಸಹನ**
ಎಲ್.ಎಚ್.ಎಸ್
ಪ್ರೌಢಶಾಲೆ,
ಹಂಪಸಾಗರ
ಶಿಕ್ಷಕರು–
ವಿಜಯಕುಮಾರ
ಬೇಂದ್ರೆ

**2. ಅಕ್ಷತ ಕೆ.ವಿ**
ಕೌದಿ ಮಹಾಂತೇಶ್ವರ ಪ್ರೌಢಶಾಲೆ,
ಬಾಚಿಗೊಂಡನಹಳ್ಳಿ
ಶಿಕ್ಷಕರು–ವಿ ಪ್ರಕಾಶಪ್ಪ

**3. ಕೆ. ಶ್ರೀದೇವಿ**
ಸರ್ಕಾರಿ ಪ್ರೌಢಶಾಲೆ, ಉಪನಾಯಕನಹಳ್ಳಿ
ಶಿಕ್ಷಕರು–ಕವಿತಾ

**4. ಬಿ.ಲಕ್ಷ್ಮಿ**
ಶ್ರೀ ಗುರುಬಸವೇಶ್ವರ ಪ್ರೌಢಶಾಲೆ, ಬೆಣಕಲ್ಲು
ಶಿಕ್ಷಕರು–ಶಿವತನಯ ಎಸ್.ಸಿ

**5. ಹೆಚ್.ರೇಶ್ಮ**
ಸರ್ಕಾರಿ ಪ್ರೌಢಶಾಲೆ, ವರದಾಪುರ
ಶಿಕ್ಷಕರು–ಮಂಜುಳಾ

**6. ಕೆ. ಸಂಗೀತ**
ಶ್ರೀ ಚಂದ್ರಮೌಳೇಶ್ವರ ಪ್ರೌಢಶಾಲೆ,
ಹಂಪಾಪಟ್ಟಣ
ಶಿಕ್ಷಕರ ಹೆಸರು–ರಾಘವೇಂದ್ರ ಪಿ

**7. ತನುಶ್ರೀ**
ಕ್ರಿಸ್ತ ಶರಣ ವಿದ್ಯಾಪೀಠ
ಹಗರಿಬೊಮ್ಮನಹಳ್ಳಿ
ಶಿಕ್ಷಕರು– ಶೋಭಾ ನೆಲ್ಕುದ್ರಿ

**8. ಹೆಚ್. ವೀಣ**
ಸರ್ಕಾರಿ ಪ್ರೌಢಶಾಲೆ, ವಟ್ಟಮ್ಮನಹಳ್ಳಿ
ಶಿಕ್ಷಕರು– ಸುಮಿತ್ರ

**9. ಸುಧಾ ಬಿ**
ಸರ್ಕಾರಿ ಪ್ರೌಢಶಾಲೆ, ಗದ್ದಿಕೇರಿ
ಶಿಕ್ಷಕರು–ರವಿಚಂದ್ರ ನಾಯ್ಕ ಎಲ್

**10. ಪಿ. ಚಂದನ**
ರಾಷ್ಟ್ರೋತ್ಥಾನ ಪ್ರೌಢಶಾಲೆ, ಹ.ಬೊ. ಹಳ್ಳಿ
ಶಿಕ್ಷಕರು–ಎಲ್. ವೆಂಕಟೇಶ್ 12. ಕಾವ್ಯ
ಕೆಪಿಜಿ ಪ್ರೌಢಶಾಲೆ, ತಂಬ್ರಹಳ್ಳಿ
ಶಿಕ್ಷಕರು–ರಾಜೇಶ್ವರಿ ಜೆ

**11. ಎ. ಭಾವನ**
ಶ್ರೀ ಗುರು ಕೊಟ್ಟೂರೇಶ್ವರ
ಪ್ರೌಢಶಾಲೆ, ಮಾಲವಿ
ಶಿಕ್ಷಕರು–ಕೊಟ್ರೇಶ್

**12. ಬಿ.ವಿದ್ಯಾ**
ಕೃಷ್ಣಮೂರ್ತಿ
ರಾವ್
ಸ್ಮಾರಕ
ಪ್ರೌಢಶಾಲೆ,
ದಶಮಾಪುರ
ಶಿಕ್ಷಕರು–
ಅನಿತಾ

**13. ವೀರಮ್ಮ**
ಶ್ರೀ ಗುರು ಶಿವಶಾಂತವೀರ
ಪ್ರೌಢಶಾಲೆ, ಕಡ್ಲಬಾಳು
ಶಿಕ್ಷಕರು–ಪರಶುರಾಮ ಡಿ

**14. ಎ.ಕೀರ್ತನ**
ಸರ್ಕಾರಿ ಪ್ರೌಢಶಾಲೆ, ಸೊನ್ನ
ಶಿಕ್ಷಕರು– ಫಕೀರ್ ಗೌಡ ಪಾಟೀಲ್

**15. ಹೆಚ್. ರಂಜಿತ**
ಸರ್ಕಾರಿ ಪ್ರೌಢಶಾಲೆ, ತೆಲುಗೊಳಿ
ಶಿಕ್ಷಕರು– ರವೀಂದ್ರ

**16. ಕೆ.ಸಂಜನ**
ಸರ್ಕಾರಿ ಪ್ರೌಢಶಾಲೆ, ವಲ್ಲಭಾಪುರ
ಶಿಕ್ಷಕರು– ಶಾಹಿದ್ ಬಾಷ .ಎನ್

**17. ಗಾಯತ್ರಿ ಸಿ**
ಕಿ.ರಾ.ಚೆ.ವ.ಶಾಲೆ, ವರಲಹಳ್ಳಿ
ಶಿಕ್ಷಕರು–ಸಿದ್ದೇಶ್

**18. ಆರ್.ಯರಿಯಮ್ಮ**
ಕೆ.ಪಿ.ಸ.ಪ.ಪೂ.ಕಾಲೇಜ್
ಹ.ಬೊ.ಹಳ್ಳಿ
ಶಿಕ್ಷಕರು– ಮುದ್ದಮ್ಮ

**19. ಅನಿತಾ ಪಿ**
ಇಂ.ಬಾ.ಪ್ರೌ.ಶಾಲೆ ಹ.ಬೊ.ಹಳ್ಳಿ
ಶಿಕ್ಷಕರು– ಸುನಿತ

**20. ಬಿ.ಗೀತ**
ಸರ್ಕಾರಿ ಪ್ರೌಢಶಾಲೆ, ಮಾದೂರು
ಶಿಕ್ಷಕರು– ಗಾಯತ್ರಿ

**21. ಚಂದನ**
ಸರ್ಕಾರಿ ಪ್ರೌಢಶಾಲೆ, ಚಿಲಗೋಡು
ಶಿಕ್ಷಕರು– ಶಾಹಿಸ್ತಾ ಸುಲ್ತಾನ

**22. ಬಿ.ಚರನ್ಯ**
ಆದರ್ಶ ವಿದ್ಯಾಲಯ, ಹ.ಬೊ.ಹಳ್ಳಿ
ಶಿಕ್ಷಕರು– ಶಶಿರೇಖಾ



### ಹಡಗಲಿ ತಾಲೂಕು

**1. ಅಶ್ವಿನಿ ಗೊರವರ**
ಸರ್ಕಾರಿ ಪ್ರೌಢಶಾಲೆ, ಹಿರೆಮಲ್ಲನಕೆರೆ
ಶಿಕ್ಷಕರು– ಕವಿತಾ ಕೆ.ಎಂ

**2. ಈಡಿಗರ ವಿರುಪಾಕ್ಷಿ**
ವಿ.ಕೆ.ಕೆ ಕರ್ನಾಟಕ ಪಬ್ಲಿಕ್ ಶಾಲೆ
ಹಿರೇಹಡಗಲಿ
ಶಿಕ್ಷಕರು– ಪಾಂಡುನಾಯ್ಕ & ಕವಿತಾ

### ಹರಪನಹಳ್ಳಿ ತಾಲೂಕು

**1. ಎಂ.ನಿಂಗರಾಜ**
ಸರ್ಕಾರಿ ಪ್ರೌಢಶಾಲೆ, ಕಡಬಗೆರೆ
ಶಿಕ್ಷಕರು– ಸೋಮಪ್ಪ ನಿಲುಗೋಳ್

**2. ಮನೋಜ ಎ**
ಜಿ.ಜೆ.ಸಿ ಪ್ರೌ.ಶಾಲೆ, ಲಕ್ಷ್ಮಿಪುರ
ಶಿಕ್ಷಕರು– ಸಾಹಿರಾಬಾನು

### ಕೊಟ್ಟೂರು ತಾಲೂಕು

**1. ಯು.ಪ್ರಿಯ**
ಸರ್ಕಾರಿ ಪ್ರೌಢಶಾಲೆ, ಅಂಬಳಿ
ಶಿಕ್ಷಕರು–ಕೊಟ್ರೇಶ್ ನಾಯ್ಕ

### ಕೂಡ್ಲಿಗಿ ತಾಲೂಕು

**1. ಆಫ್ರೀನ್**
ಶರಣಬಸವೇಶ್ವರ ಪ್ರೌಢಶಾಲೆ,
ಕಾನಾಮಡುಗು
ಶಿಕ್ಷಕರು–

### ಬಳ್ಳಾರಿ ಜಿಲ್ಲೆ

**1. ಬಿ.ಅಮಲ**
ಸರ್ಕಾರಿ ಪ್ರೌಢಶಾಲೆ, ಇಂದಿರಾನಗರ
ಬಳ್ಳಾರಿ
ಶಿಕ್ಷಕರು– ಷಾಹಿನಾ

**2. ಹೇಮಾ ಕೆ**
ಶ್ರೀ.ಉ.ಜ.ಸಿ.ಪ್ರೌಢಶಾಲೆ ಸಂಡೂರು
ಶಿಕ್ಷಕರು– ಸುಧಾ ಎಸ್.ಎಂ

### ಕೊಪ್ಪಳ ಜಿಲ್ಲೆ

**1. ಮಂಜುಳಾ ಕೆ ಮಾಲಿಪಾಟೀಲ್**
ಶ್ರೀ ಸಿದ್ದರಾಮೇಶ್ವರ ಪ್ರೌಢಶಾಲೆ,
ಯಲಬುರ್ಗ, ಕೊಪ್ಪಳ ಜಿಲ್ಲೆ
ಶಿಕ್ಷಕರು– ದುರ್ಗಪ್ಪ ಹೆಚ್

### ಗದಗ ಜಿಲ್ಲೆ

**1. .ಅಶ್ವಿನಿ ಜವಳಿ**
ಶ್ರೀ ಫಲಹಾರೇಶ್ವರ ಪ್ರೌಢಶಾಲೆ, ಹಸೂಟಿ
ರೋಣ ತಾ. ಗದಗ ಜಿ.
ಶಿಕ್ಷಕರು–ಒ.ಗಿ ಪ್ರಕಾಶಾರಾಧ್ಯ

### ಶಿವಮೊಗ್ಗ ಜಿಲ್ಲೆ

**1. ಅಕ್ಷಯಕುಮಾರ**
ಶ್ರೀ ಮಲ್ಲಿಕಾರ್ಜುನಸ್ವಾಮಿ ಪ್ರೌಢಶಾಲೆ,
ಆಗರದ ಹಳ್ಳಿ
ಭದ್ರಾವತಿ ತಾ. ಶಿವಮೊಗ್ಗ ಜಿ.
ಶಿಕ್ಷಕರು–ಎಂ.ಜಿ ಮಂಜುನಾಥ

**2. ರಜನಿ ಕೆ.ಆರ್**
ಸರ್ಕಾರಿ ಪ್ರೌಢಶಾಲೆ,, ಬಿಳಲುಕೊಪ್ಪ
ತೀರ್ಥಹಳ್ಳಿ ತಾ. ಶಿವಮೊಗ್ಗ ಜಿ
ಶಿಕ್ಷಕರು– ತಾರಾಜ್ಯೋತಿ ಪಿ

**ಭಾಗವಹಿಸಿದ ಶಾಲೆಗಳು**

**ಹೊಸಪೇಟೆ– 28, ಹೆಚ್.ಬಿ.ಹಳ್ಳಿ–22, ಹಡಗಲಿ–2, ಹರಪನಹಳ್ಳಿ–2, ಕೊಟ್ಟೂರು–1, ಕೂಡ್ಲಿಗಿ–1, ಬಳ್ಳಾರಿ–2, ಕೊಪ್ಪಳ–1, ಗದಗ–1, ಶಿವಮೊಗ್ಗ–2**

**ನಿನ್ನ ಏಳಿಗೆಗೆ ನೀನೆ ಶಿಲ್ಪಿ**





